## ಅನುಬಂಧ – ೩

# ಪಿಎಚ್.ಡಿ. ಅಧ್ಯಯನದ ನಿಯಮಾವಳಿ

ಅಧ್ಯಯನಾಂಗ

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

ವಿದ್ಯಾರಣ್ಯ ೫೮೩ ೨೭೬, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

**ದೂ: ೦೮೩೯೪–೨೪೧೪೬೪, ೨೪೧೩೩೭ ವಿಸ್ತರಣೆ ೩೩೫, ಫ್ಯಾಕ್ಸ್ : ೦೮೩೯೪–೨೪೧೩೩೫**

---

# ಪಿಎಚ್.ಡಿ. ಅಧ್ಯಯನದ ನಿಯಮಾವಳಿ

**ಎಂ.ಫಿಲ್, ಪಿಎಚ್.ಡಿ. ಪದವಿಗಳಿಗಾಗಿ ಗುಣಮಟ್ಟ ಮತ್ತು ಪ್ರಕ್ರಿಯೆಗಳು ಯುಜಿಸಿ ನಿಬಂಧನೆಗಳು ೨೦೦೯ರ ಅನ್ವಯ**

**Ref: UGC (Minimum Standards and Procedure For Award of M.Phil/Ph.D Degree) Regulation, 2009, F.1-1/2002 (PS) - Exeme, Date: 01.06.2009**

**೧. ಪಿಎಚ್.ಡಿ. ಅಧ್ಯಯನಕ್ಕೆ ಅರ್ಹತೆ:**

೧. ಯುಜಿಸಿಯಿಂದ ಅನುಮೋದನೆ ಪಡೆದ ವಿಶ್ವವಿದ್ಯಾಲಯಗಳಿಂದ ಎರಡು ವರ್ಷದ ಸ್ನಾತಕೋತ್ತರ ಪದವಿಯಲ್ಲಿ ಶೇ.೫೫ ಅಂಕ ಪಡೆದವರು ಪಿಎಚ್.ಡಿ. ಅಧ್ಯಯನಕ್ಕೆ ನೋಂದಣಿ ಮಾಡಿಕೊಳ್ಳಲು ಅರ್ಹರಾಗಿರುತ್ತಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–೧ಕ್ಕೆ ಸೇರಿದ ಅಭ್ಯರ್ಥಿಗಳು ಸ್ನಾತಕೋತ್ತರ ಪದವಿಯಲ್ಲಿ ಶೇ.೫೦ ಅಂಕ ಪಡೆದಿದ್ದರೆ ನೋಂದಣಿಗೆ ಅರ್ಹ

೨. ದಿನಾಂಕ: ೩೧.೦೩.೧೯೯೨ಕ್ಕೆ ಮೊದಲು ಸರಕಾರಿ ಹಾಗೂ ಅನುದಾನಿತ ಪದವಿ ಹಾಗೂ ಪದವಿ ನಂತರ ಕಾಲೇಜು/ವಿಶ್ವವಿದ್ಯಾಲಯಗಳಲ್ಲಿ ಖಾಯಂ ಆಗಿ ನೇಮಕಗೊಂಡ ಹಾಗೂ ನಿಯಮಿತ ಸೇವೆಯಲ್ಲಿರುವ ಅಧ್ಯಾಪಕರು ಸ್ನಾತಕೋತ್ತರ ಪದವಿಯಲ್ಲಿ ಶೇ. ೫೦ ಅಂಕ ಪಡೆದಿದ್ದರೆ ಅವರು ನೋಂದಣಿಗೆ ಅರ್ಹರಾಗಿರುತ್ತಾರೆ.

೩. ಮೂರು ವರ್ಷದ ಪದವಿ ಎರಡು ವರ್ಷದ ಸ್ನಾತಕೋತ್ತರ ಪದವಿಯ ಪದವಿ ಹೊಂದಿರುವ ಅಭ್ಯರ್ಥಿಗಳು ಪ್ರವೇಶಕ್ಕೆ ಅರ್ಹರು. ಪದವಿ ವಿಷಯವೇ ಸ್ನಾತಕೋತ್ತರ ಪದವಿಯ ವಿಷಯವಾಗಿರುವುದು ಸೂಕ್ತ.

೪. ಯುಜಿಸಿ/ಸಿಎಸ್ಐಆರ್/ಎನ್ಇಟಿ/ಎಸ್ಎಲ್ಇಟಿ/ಜಿಎಟಿಇ/ಜೆಆರ್ಎಫ್/ಎಂ.ಫಿಲ್ ಅಥವಾ ಎಫ್ಐಪಿ/ ಕ್ಯೂಐಪಿಕಾರ್ಯಕ್ರಮಗಳಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯ ಅಗತ್ಯವಿಲ್ಲ. ಇದಲ್ಲದೆ ವಿಶೇಷ ಅನುದಾನಿತ ಯೋಜನೆಗಳಲ್ಲಿ ಆಯ್ಕೆಯಾಗಿ ಕೆಲಸ ಮಾಡುತ್ತಿರುವ ಅಭ್ಯರ್ಥಿಗಳು ಹಾಗೂ ಸರ್ಕಾರವು ಪ್ರಾಯೋಜಿಸುವ ವಿದೇಶಿ ವಿದ್ಯಾರ್ಥಿಗಳಿಗೂ ಸಹ ಲಿಖಿತ ಪರೀಕ್ಷೆಯಿಂದ ಮಾತ್ರ ವಿನಾಯಿತಿ ನೀಡಲಾಗಿದೆ. ಆಯಾ ವಿಭಾಗದ ಪಿಎಚ್.ಡಿ. ಸಮಿತಿಯು ಮೌಖಿಕ ಪರೀಕ್ಷೆಯನ್ನಾಧರಿಸಿ ಇವರಿಗೆ ತಾತ್ಕಾಲಿಕ ನೋಂದಣಿ ನೀಡುವ ಬಗ್ಗೆ ಶಿಫಾರಸ್ಸು ಮಾಡಬಹುದು.

೫. ಮೇಲೆ ತಿಳಿಸಿರುವ ಅ ಮತ್ತು ಆ ನಿಯಮಗಳ ಪ್ರಕಾರ ಅರ್ಹತೆ ಪಡೆದವರು ವಿಶ್ವವಿದ್ಯಾಲಯ ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಭಾಗವಹಿಸಿ ಆಯ್ಕೆಯಾಗಬೇಕು.

೬. ಕನ್ನಡ ವಿಶ್ವವಿದ್ಯಾಲಯದಲ್ಲಿ ಚಾಲ್ತಿಯಲ್ಲಿರುವ ಅಧ್ಯಯನ ವಿಭಾಗ ಮತ್ತು ವಿಷಯಗಳಿಗೆ ಮಾತ್ರ ಅರ್ಜಿ ಸಲ್ಲಿಸಬಹುದು.

**೨. ಪಿಎಚ್.ಡಿ. ಅಧ್ಯಯನ ಸಮಿತಿ**

**ಆಯಾ ನಿಕಾಯ/ವಿಭಾಗಗಳಿಗನುಗುಣವಾಗಿ ಈ ಸಮಿತಿಯನ್ನು ರಚಿಸುವುದು.**

**೨.೧. ಈ ಸಮಿತಿಯ ರಚನೆ ಕೆಳಕಂಡಂತಿರುತ್ತದೆ.**

| | |
|---|---|
| ೧. ನಿಕಾಯದ ಡೀನ್ | ಅಧ್ಯಕ್ಷರು |
| ೨. ವಿಭಾಗದಲ್ಲಿರುವ ಎಲ್ಲ ಪಿಎಚ್.ಡಿ. ಮಾರ್ಗದರ್ಶಕರು | ಸದಸ್ಯರು |
| ೩. ವಿಭಾಗದ ಮುಖ್ಯಸ್ಥರು | ಸದಸ್ಯ–ಸಂಚಾಲಕರು |

ಒಂದು ವೇಳೆ ನಿಕಾಯದ ಡೀನ್ ಇಲ್ಲದ ಸಂದರ್ಭದಲ್ಲಿ ಆ ವಿಭಾಗದ ಹಿರಿಯ ಪ್ರಾಧ್ಯಾಪಕರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

**೨.೨. ಪಿಎಚ್.ಡಿ. ಅಧ್ಯಯನ ಸಮಿತಿಯ ಕಾರ್ಯಗಳು**

೧. ತಾತ್ಕಾಲಿಕ ನೋಂದಣಿಯಾದ ಆರು ತಿಂಗಳ ಒಳಗೆ ಪಿಎಚ್.ಡಿ. ಅಧ್ಯಯನ ಪ್ರಬಂಧದ ನಿರ್ದಿಷ್ಟ ಶೀರ್ಷಿಕೆ ಮತ್ತು ವ್ಯಾಪ್ತಿ ಖಚಿತವಾಗಬೇಕು. ವಿಭಾಗದ ಪಿಎಚ್.ಡಿ. ಅಧ್ಯಯನ ಸಮಿತಿಯು ಹಾಗೆ ಖಚಿತಪಡಿಸಿಕೊಂಡು ವಿಷಯವನ್ನು ಮತ್ತೊಮ್ಮೆ ಪರಿಶೀಲಿಸಿ ಅಂತಿಮವಾಗಿ ಅಧಿಕೃತಗೊಳಿಸಬೇಕು.

೨. ಮಾರ್ಗದರ್ಶಕರ ಮನ್ನಣೆಗೆ ಶಿಫಾರಸ್ಸು ಮಾಡುವುದು.

೩. ಮಾರ್ಗದರ್ಶಕರ ಬದಲಾವಣೆಗೆ ಅಥವಾ ವಿಭಾಗಗಳ ಬದಲಾವಣೆಗೆ ಸಕಾರಣವಾಗಿದ್ದ ಪಕ್ಷದಲ್ಲಿ ಅನುಮತಿ ನೀಡುವುದು.

೪. ಮಾರ್ಗದರ್ಶಕರು ಶಿಫಾರಸ್ಸು ಮಾಡಿದರೆ ಶೀರ್ಷಿಕೆಯ ಬದಲಾವಣೆಗೆ ಅನುಮತಿ ನೀಡುವುದು.

೫. ಮಾರ್ಗದರ್ಶಕರ ಮೂಲಕ ಸ್ವೀಕೃತವಾದ ಅರೆವಾರ್ಷಿಕ ಪ್ರಗತಿ ವರದಿಯನ್ನು ಪರಿಶೀಲಿಸುವುದು. ಪ್ರಗತಿ ವರದಿ ನಿಗದಿತವಾಗಿ ಮತ್ತು ಸಮರ್ಪಕವಾಗಿ ಸಲ್ಲಿಸದಿದ್ದಲ್ಲಿ, ಕ್ರಮಬದ್ಧತೆ ಇಲ್ಲದಿದ್ದಲ್ಲಿ ಅಂಥ ನೋಂದಣಿ ರದ್ಧತಿಗೆ ಶಿಫಾರಸ್ಸು ಮಾಡುವುದು.

೬. ಪಿಎಚ್.ಡಿ. ಅಧ್ಯಯನ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ವಿಶ್ವವಿದ್ಯಾಲಯವು ತಿಳಿಸುವ ಇತರೆ ಜವಾಬ್ದಾರಿಗಳನ್ನು ನಿರ್ವಹಿಸುವುದು

**೩. ಅಧ್ಯಯನದ ವಿಷಯ:**

೧. ಅಭ್ಯರ್ಥಿಯು ಸಂಶೋಧನೆಗೆ ಆರಿಸಿಕೊಳ್ಳುವ ವಿಷಯ ಕರ್ನಾಟಕದ ಭಾಷೆ, ಕಲೆ, ಸಾಹಿತ್ಯ, ಸಂಸ್ಕೃತಿ, ಚರಿತ್ರೆ, ಸಮಾಜ, ಭಾಷಾಂತರ, ಅಭಿವೃದ್ಧಿ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿರಬೇಕು. ಇದು ಕರ್ನಾಟಕಕ್ಕೆ ಸಂಬಂಧಿಸಿದ ವಿಷಯ ಮತ್ತು ಬೇರೊಂದು ವಿಷಯದ ತೌಲನಿಕ ಅಧ್ಯಯನ ಆಗಿರಬಹುದು.

೨. ಪಿಎಚ್.ಡಿ. ಪದವಿಗಾಗಿ ಅರ್ಜಿಗಳನ್ನು ಕರೆಯುವ ಸಂದರ್ಭದಲ್ಲಿ ಆಯಾ ವಿಭಾಗಗಳ ಸೂಚನಾಫಲಕದಲ್ಲಿ ಹಾಗೂ ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್‌ಲ್ಲಿ ಆದ್ಯತೆ ವಿಷಯಗಳನ್ನು ಪ್ರದರ್ಶಿಸುವುದು. ಆದರೆ ಈ ಆದ್ಯತಾ ವಿಷಯಗಳೇ ಅಂತಿಮವೆಂದೇನೂ ಅಲ್ಲ.

೩. ಮಾರ್ಗದರ್ಶಕರು ಮತ್ತು ಅಭ್ಯರ್ಥಿಯು ಉತ್ತಮ ವಿಷಯವನ್ನು ಆಯ್ಕೆ ಮಾಡಿ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದಲ್ಲಿ ಅದು ಸೂಕ್ತವೆನಿಸಿದರೆ ಅಧ್ಯಯನಕ್ಕೆ ಅವಕಾಶಗಳಿರುತ್ತವೆ. ವಿಶ್ವವಿದ್ಯಾಲಯದ ಪ್ರತಿಯೊಂದು ವಿಭಾಗಗಳು ವಿಷಯದ ಶೀರ್ಷಿಕೆಗಿಂತ ಆದ್ಯತೆಯ ಕ್ಷೇತ್ರವನ್ನು ಮಾತ್ರ ಸೂಚಿಸುತ್ತವೆ. ಸಂಶೋಧನೆ ಸಾಧ್ಯತೆ ಮತ್ತು ಆದ್ಯತೆ ನೀಡಬಹುದಾದ ಕ್ಷೇತ್ರಗಳ ಆಧಾರದ ಮೇಲೆ ಮಾರ್ಗದರ್ಶಕರು ಮತ್ತು ಅಭ್ಯರ್ಥಿಗಳು ಅಧ್ಯಯನವನ್ನು ಕೈಗೊಳ್ಳುವ ಮತ್ತು ವಿಸ್ತರಿಸಿಕೊಳ್ಳುವ ಅವಕಾಶಗಳಿರುತ್ತವೆ.

**ಕನ್ನಡ ವಿಶ್ವವಿದ್ಯಾಲಯದ ವಿದ್ಯಾರಣ್ಯದಲ್ಲಿ ಪಿಎಚ್.ಡಿ ಅಧ್ಯಯನ ಕೈಗೊಳ್ಳುವ ವಿಭಾಗಗಳು, ಪ್ರವೇಶಾರ್ಹತೆ ವಿಷಯ, ಸಹವರ್ತಿ ವಿಷಯಗಳು (Cognate Subjects) ಹಾಗೂ ಪದವಿ ನೀಡುವ ವಿಷಯಗಳು**

| ವಿಭಾಗಗಳು | ಅರ್ಹತಾ ವಿಷಯಗಳು | ಸಹವರ್ತಿ ವಿಷಯಗಳು | ಪದವಿ ನೀಡುವ ವಿಷಯಗಳು |
|---|---|---|---|
| **ಭಾಷಾ ನಿಕಾಯ** | | | |
| ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ | ಕನ್ನಡ ವಿಷಯದಲ್ಲಿ ೨ ವರ್ಷಗಳ ಸ್ನಾತಕೋತ್ತರ ಪದವಿ ಆಗಿರಬೇಕು. | ಯಾವುದೇ ಭಾಷೆ, ಸಾಹಿತ್ಯ, ಜಾನಪದ, ಚರಿತ್ರೆ, ಸಮಾಜಶಾಸ್ತ್ರ | ಕನ್ನಡ ಸಾಹಿತ್ಯ |
| ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ | ಕನ್ನಡ ವಿಷಯದಲ್ಲಿ ೨ ವರ್ಷಗಳ ಸ್ನಾತಕೋತ್ತರ ಪದವಿ ಆಗಿರಬೇಕು. | ಕನ್ನಡ ಜ್ಞಾನದೊಂದಿಗೆ ಇತರ ದ್ರಾವಿಡಭಾಷೆ ಮತ್ತು ಭಾಷಾವಿಜ್ಞಾನ | ಕನ್ನಡ ಸಾಹಿತ್ಯ |
| ಹಸ್ತಪ್ರತಿಶಾಸ್ತ್ರ ಅಧ್ಯಯನ ವಿಭಾಗ | ಕನ್ನಡ ವಿಷಯದಲ್ಲಿ ೨ ವರ್ಷಗಳ ಸ್ನಾತಕೋತ್ತರ ಪದವಿ ಆಗಿರಬೇಕು. | ಕನ್ನಡ, ಇಂಗ್ಲೀಷ್, ಜಾನಪದ | ಕನ್ನಡ ಸಾಹಿತ್ಯ/ ಹಸ್ತಪ್ರತಿಶಾಸ್ತ್ರ |
| ಕನ್ನಡ ಭಾಷಾಧ್ಯಯನ ವಿಭಾಗ | ಭಾಷಾಶಾಸ್ತ್ರ, ಭಾಷಾವಿಜ್ಞಾನ ವಿಷಯಗಳಲ್ಲಿ ೨ ವರ್ಷಗಳ ಸ್ನಾತಕೋತ್ತರ ಪದವಿ ಆಗಿರಬೇಕು. | ಭಾಷಾಶಾಸ್ತ್ರ, ಭಾಷಾವಿಜ್ಞಾನ, ಕನ್ನಡ | ಕನ್ನಡ ಭಾಷಾಧ್ಯಯನ/ ಕನ್ನಡ ಸಾಹಿತ್ಯ |

| | | | |
|---|---|---|---|
| ಭಾಷಾಂತರ ಅಧ್ಯಯನ ವಿಭಾಗ | ಕನ್ನಡ, ಇಂಗ್ಲೀಷ್, ಹಿಂದಿ ಹಾಗೂ ಇತರೆ ಭಾಷಾ ವಿಷಯಗಳಲ್ಲಿ ೨ ವರ್ಷಗಳ ಸ್ನಾತಕೋತ್ತರ ಪದವಿ ಆಗಿರಬೇಕು. | ಕನ್ನಡ, ಇಂಗ್ಲೀಷ್, ಹಿಂದಿ ಹಾಗೂ ಇತರೆ ಭಾಷಾ ವಿಷಯಗಳು | ಕನ್ನಡ ಸಾಹಿತ್ಯ/ ಭಾಷಾಂತರ |
| ಮಹಿಳಾ ಅಧ್ಯಯನ ವಿಭಾಗ | ಮಹಿಳಾ ಅಧ್ಯಯನ, ಕನ್ನಡ ಹಾಗೂ ಮಾನವಿಕ ವಿಷಯಗಳಲ್ಲಿ ೨ ವರ್ಷಗಳ ಸ್ನಾತಕೋತ್ತರ ಪದವಿ ಆಗಿರಬೇಕು. | ಮಹಿಳಾ ಅಧ್ಯಯನ, ಕನ್ನಡ ಹಾಗೂ ಮಾನವಿಕ ವಿಷಯಗಳು | ಕನ್ನಡ ಸಾಹಿತ್ಯ/ ಮಹಿಳಾ ಅಧ್ಯಯನ |
| ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ | ಕನ್ನಡ ವಿಷಯದಲ್ಲಿ ೨ ವರ್ಷಗಳ ಸ್ನಾತಕೋತ್ತರ ಪದವಿ ಆಗಿರಬೇಕು. | ಕನ್ನಡ | ಕನ್ನಡ ಸಾಹಿತ್ಯ |
| ಅಂತರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ, ಕೂಡಲಸಂಗಮ | ಕನ್ನಡ ವಿಷಯದಲ್ಲಿ ೨ ವರ್ಷಗಳ ಸ್ನಾತಕೋತ್ತರ ಪದವಿ ಆಗಿರಬೇಕು. | ಕನ್ನಡ ಮತ್ತು ಇಂಗ್ಲೀಷ್ | ಕನ್ನಡ ಸಾಹಿತ್ಯ |
| **ಸಮಾಜವಿಜ್ಞಾನಗಳ ನಿಕಾಯ** | | | |
| ಚರಿತ್ರೆ ವಿಭಾಗ | ಚರಿತ್ರೆ ಮತ್ತು ಪುರಾತತ್ವ ವಿಷಯಗಳಲ್ಲಿ ೨ ವರ್ಷಗಳ ಸ್ನಾತಕೋತ್ತರ ಪದವಿ ಆಗಿರಬೇಕು. | ಚರಿತ್ರೆ, ಪುರಾತತ್ವ, ಸಮಾಜಶಾಸ್ತ್ರ, ಜಾನಪದ, ಕನ್ನಡ | ಚರಿತ್ರೆ |
| ಬುಡಕಟ್ಟು ಅಧ್ಯಯನ ವಿಭಾಗ | ಕನ್ನಡ, ಜಾನಪದ ಹಾಗೂ ಸಮಾಜಶಾಸ್ತ್ರದಲ್ಲಿ ೨ ವರ್ಷಗಳ ಸ್ನಾತಕೋತ್ತರ ಪದವಿ ಆಗಿರಬೇಕು. | ಕನ್ನಡ, ಜಾನಪದ, ಸಮಾಜಶಾಸ್ತ್ರ, ಸಮಾಜಕಾರ್ಯ ಹಾಗೂ ಮಾನವಶಾಸ್ತ್ರ | ಕನ್ನಡ/ಜಾನಪದ/ ಸಮಾಜಶಾಸ್ತ್ರ |
| ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ | ಚರಿತ್ರೆ ಹಾಗೂ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಷಯಗಳಲ್ಲಿ ೨ ವರ್ಷಗಳ ಸ್ನಾತಕೋತ್ತರ ಪದವಿ ಆಗಿರಬೇಕು. | ಚರಿತ್ರೆ ಹಾಗೂ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ | ಪ್ರಾಚೀನ ಇತಿಹಾಸ ಮತ್ತು ಪುರಾತತ್ವ |
| ಜಾನಪದ ಅಧ್ಯಯನ ವಿಭಾಗ | ಜಾನಪದ ವಿಷಯದಲ್ಲಿ ೨ ವರ್ಷಗಳ ಸ್ನಾತಕೋತ್ತರ ಪದವಿ ಆಗಿರಬೇಕು. | ಜಾನಪದ, ಕನ್ನಡ, ಸಮಾಜಶಾಸ್ತ್ರ, ಮನಶಾಸ್ತ್ರ, ಅರ್ಥಶಾಸ್ತ್ರ | ಜಾನಪದ/ಕನ್ನಡ |
| ಶಾಸನಶಾಸ್ತ್ರ ವಿಭಾಗ | ಕನ್ನಡ, ಚರಿತ್ರೆ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಷಯಗಳಲ್ಲಿ ೨ ವರ್ಷಗಳ ಸ್ನಾತಕೋತ್ತರ ಪದವಿ ಆಗಿರಬೇಕು. | ಕನ್ನಡ, ಚರಿತ್ರೆ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ | ಕನ್ನಡ/ಚರಿತ್ರೆ/ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ/ ಶಾಸನಶಾಸ್ತ್ರ |
| ಅಭಿವೃದ್ಧಿ ಅಧ್ಯಯನ ವಿಭಾಗ | ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ವಾಣಿಜ್ಯಶಾಸ್ತ್ರ ವಿಷಯಗಳಲ್ಲಿ ೨ ವರ್ಷಗಳ ಸ್ನಾತಕೋತ್ತರ ಪದವಿ ಆಗಿರಬೇಕು. | ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಗ್ರಾಮೀಣಾಭಿವೃದ್ಧಿ, ವಾಣಿಜ್ಯಶಾಸ್ತ್ರ | ಅರ್ಥಶಾಸ್ತ್ರ/ ಸಮಾಜಶಾಸ್ತ್ರ/ ರಾಜ್ಯಶಾಸ್ತ್ರ/ ವಾಣಿಜ್ಯಶಾಸ್ತ್ರ |
| ಮಾನವಶಾಸ್ತ್ರ ವಿಭಾಗ | ಮಾನವಶಾಸ್ತ್ರ, ಸಮಾಜಶಾಸ್ತ್ರ ವಿಷಯಗಳಲ್ಲಿ ೨ ವರ್ಷಗಳ ಸ್ನಾತಕೋತ್ತರ ಪದವಿ ಆಗಿರಬೇಕು. | ಜಾನಪದ, ಮಾನವಶಾಸ್ತ್ರ, ಸಮಾಜಶಾಸ್ತ್ರ | ಮಾನವಶಾಸ್ತ್ರ/ ಸಮಾಜಶಾಸ್ತ್ರ |
| **ಲಲಿತಕಲೆಗಳ ನಿಕಾಯ** | | | |
| ದೃಶ್ಯಕಲೆ ವಿಭಾಗ | ಎಂ.ಎಫ್.ಎ, (ಮಾಸ್ಟರ್ ಆಫ್ ಫೈನ್ ಆರ್ಟ್ಸ್) ಎಂ.ವಿ.ಎ. (ಮಾಸ್ಟರ್ ಆಫ್ ವಿಜುವಲ್ ಆರ್ಟ್ಸ್), ಎಂ.ಎ.ಚಿತ್ರಕಲೆ ಸ್ನಾತಕೋತ್ತರ ಪದವಿ ಆಗಿರಬೇಕು. | ಇತಿಹಾಸ, ಚರಿತ್ರೆ, ಪುರಾತತ್ವ, ಕನ್ನಡ ಸಾಹಿತ್ಯ ಜಾನಪದ. | ದೃಶ್ಯಕಲೆ |

ಅಭ್ಯರ್ಥಿಯ ಸ್ನಾತಕೋತ್ತರ ಪದವಿ ಯಾವುದೆ ಆಗಿದ್ದರೂ ಅಂಕಪಟ್ಟಿ, ಪ್ರಮಾಣ ಪತ್ರ, ಅಧಿಸೂಚನೆಗಳಲ್ಲಿ ಅಭ್ಯರ್ಥಿಯು ಅಧ್ಯಯನಕ್ಕೆ ಪ್ರವೇಶ ಪಡೆದಿರುವ ವಿಭಾಗದ (ಪಿಎಚ್.ಡಿ. ನಿಯಮಾವಳಿ ಕ್ರ.ಸಂ. 3ರನ್ವಯ) ವಿಷಯವನ್ನು ಮಾತ್ರ ನಮೂದಿಸಲಾಗುವುದು.

**೪. ಪಿಎಚ್.ಡಿ. ಮಹಾಪ್ರಬಂಧದ ಭಾಷೆ**

ಅಭ್ಯರ್ಥಿಯು ಪಿಎಚ್.ಡಿ. ಮಹಾಪ್ರಬಂಧವನ್ನು ಕನ್ನಡದಲ್ಲಿಯೇ ಬರೆಯಬೇಕು. ಅನಿವಾರ್ಯ ಪ್ರಸಂಗಗಳಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಪ್ರಬಂಧವನ್ನು ಬರೆಯಬೇಕಾದಲ್ಲಿ ಖಾಯಂ ನೋಂದಣಿ ಪೂರ್ವದಲ್ಲಿ ವಿಭಾಗದ ಅಧ್ಯಯನ ಮಂಡಳಿಯ ಒಪ್ಪಿಗೆಯನ್ನು ಪಡೆಯುವುದು ಅಗತ್ಯ. ನಂತರ ಅಧ್ಯಯನಾಂಗದ ಮೂಲಕ ಕುಲಪತಿಗಳ ಒಪ್ಪಿಗೆಯನ್ನು ಪಡೆಯಬೇಕು. ಹೀಗೆ ಒಪ್ಪಿಗೆ ಪಡೆದು ಸಲ್ಲಿಸಿದ ಮಹಾಪ್ರಬಂಧದ ಕನ್ನಡ ಅನುವಾದದ ಪ್ರತಿ ಒಂದನ್ನು ಹಾಗೂ ಸಿ.ಡಿ.ಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು ಕಡ್ಡಾಯ.

**೫. ಪ್ರವೇಶ ಪರೀಕ್ಷೆ/ಸಂದರ್ಶನ**

ಯು.ಜಿ.ಸಿ. ನಿಯಮಾನುಸಾರ ಪಿಎಚ್.ಡಿ. ಅಧ್ಯಯನಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

**೫.೧. ಅರ್ಜಿ ಆಹ್ವಾನ:**

೧. ಪಿಎಚ್.ಡಿ ಪ್ರವೇಶ ಪ್ರಕಟಣೆಯನ್ನು ಸುದ್ದಿ ಮಾಧ್ಯಮಗಳಲ್ಲಿ ಜಾಹೀರಾತು ನೀಡುವುದು. ಯು.ಜಿ.ಸಿ. ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು. ವ್ಯಾಪಕ ಪ್ರಚಾರದ ಜೊತೆಗೆ ಪ್ರತಿ ವಿಭಾಗಗಳಲ್ಲಿ ಆಯಾ ವರ್ಷ ಅಧ್ಯಯನಕ್ಕೆ ಖಾಲಿಯಿರುವ ಸೀಟುಗಳನ್ನು ಖಚಿತಪಡಿಸುವುದು.

೨. ಪ್ರತಿವರ್ಷವೂ ಅಭ್ಯರ್ಥಿಗಳು ಕನ್ನಡ ವಿಶ್ವವಿದ್ಯಾಲಯವು ನಿರ್ದಿಷ್ಟ ಪಡಿಸಿದ ಪ್ರವೇಶ ಪರೀಕ್ಷೆಯ ಅರ್ಜಿ ನಮೂನೆಯನ್ನು ನಿಗದಿತ ಶುಲ್ಕ ಪಾವತಿಸಿ ಖರೀದಿಸಬೇಕು. ಅರ್ಜಿ ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲೂ ಲಭ್ಯವಿರುತ್ತದೆ. ಡೌನ್‌ಲೋಡ್ ಮಾಡಿದ ಅರ್ಜಿಯನ್ನು ನಿಗದಿತ ಶುಲ್ಕದ ಡಿ.ಡಿ.ಯೊಂದಿಗೆ ಅಧ್ಯಯನಾಂಗಕ್ಕೆ ಸಲ್ಲಿಸಬಹುದು.

೩. ಪ್ರವೇಶ ಪರೀಕ್ಷೆಯು ಅಭ್ಯರ್ಥಿಗಳು ಎಂ.ಎ.ನಲ್ಲಿ ಸಂಬಂಧಿಸಿದ ವಿಷಯದಲ್ಲಿ ಓದಿದ ಹಾಗೂ ಪಿಎಚ್.ಡಿ.ಗೆ ಆಯ್ದುಕೊಂಡ ವಿಷಯಗಳ ಜ್ಞಾನ, ಭಾಷೆ, ಶೈಲಿ ಇತ್ಯಾದಿಗಳನ್ನು ಪರೀಕ್ಷಿಸುವ ರೀತಿಯದಾಗಿರುತ್ತದೆ. ಇದು ೧೦೦ ಅಂಕಗಳ ಪರೀಕ್ಷೆಯಾಗಿರುತ್ತದೆ. ಈ ಪರೀಕ್ಷೆಯು ಲಿಖಿತ (೮೦ ಅಂಕಗಳು) ಹಾಗೂ ಸಂದರ್ಶನ (೨೦ ಅಂಕಗಳು) ಸ್ವರೂಪದಲ್ಲಿ ಇರುತ್ತದೆ. ಇದರಲ್ಲಿ ಅಭ್ಯರ್ಥಿಯು ಲಿಖಿತ ಪರೀಕ್ಷೆಯ ೮೦ ಅಂಕಗಳಿಗೆ ಕನಿಷ್ಠ ೪೦ ಅಂಕಗಳು ಹಾಗೂ ಮೌಖಿಕ ಪರೀಕ್ಷೆಯ ೨೦ ಅಂಕಗಳಿಗೆ ಕನಿಷ್ಠ ೧೦ ಅಂಕಗಳನ್ನು ಪಡೆಯುವುದು ಅಗತ್ಯ. ಅರ್ಹರ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸುವಾಗ ಅಭ್ಯರ್ಥಿಯು ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳಲ್ಲಿ ಶೇ.೫೦ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಪಡೆದ ಅಂಕಗಳ ಶೇ. ೫೦ರ ಸರಾಸರಿಯನ್ನು ಪರಿಗಣಿಸಲಾಗುತ್ತದೆ.

೪. ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಆಯಾ ವಿಭಾಗಗಳಲ್ಲಿಯೇ ನಡೆಸಲಾಗುತ್ತದೆ. ಲಿಖಿತ ಪರೀಕ್ಷೆ ಮುಗಿದ ದಿನವೇ ಆಯಾ ವಿಭಾಗಗಳ ಪಿಎಚ್.ಡಿ. ಸಮಿತಿ ಸದಸ್ಯರು ಅಭ್ಯರ್ಥಿಯ ಮೌಖಿಕ ಪರೀಕ್ಷೆಯನ್ನು (ಸಂದರ್ಶನ) ನಡೆಸಬಹುದು. ಅನಂತರ ವಿಭಾಗಗಳು ವಿದ್ಯಾರ್ಥಿಗಳ ಆಯ್ಕೆ ಪಟ್ಟಿಯನ್ನು ಅಧ್ಯಯನಾಂಗಕ್ಕೆ ಸಲ್ಲಿಸುತ್ತವೆ.

೫. ಅಭ್ಯರ್ಥಿಗಳು ಸ್ವಂತ ಖರ್ಚಿನಲ್ಲಿ ಕನ್ನಡ ವಿಶ್ವವಿದ್ಯಾಲಯದ ವಿದ್ಯಾರಣ್ಯ ಆವರಣಕ್ಕೆ ಬಂದು ಪ್ರವೇಶ ಪರೀಕ್ಷೆಗೆ ಹಾಜರಾಗಬೇಕು.

೬. ಅಭ್ಯರ್ಥಿಗಳಿಗೆ ಪ್ರವೇಶ ಪರೀಕ್ಷೆ ಹಾಗೂ ಸಂದರ್ಶನ ಕಡ್ಡಾಯ. ಯುಜಿಸಿ/ಸಿಎಸ್‌ಐಆರ್/ಎನ್‌ಇಟಿ/ಎಸ್‌ಎಲ್‌ಇಟಿ/ಜಿಎಟಿಇ/ಜೆಆರ್‌ಎಫ್/ಎಂ.ಫಿಲ್ ಅಥವಾ ಎಫ್‌ಐಪಿ/ಕ್ಯೂಐಪಿ ಪರೀಕ್ಷೆಗಳಲ್ಲಿ ತೇರ್ಗಡೆ ಯಾದವರಿಗೆ ಲಿಖಿತ ಪರೀಕ್ಷೆಯಿಂದ ಮಾತ್ರ ವಿನಾಯಿತಿ ಇರುತ್ತದೆ. ಸಂದರ್ಶನಕ್ಕೆ ಇವರೂ ಕಡ್ಡಾಯವಾಗಿ ಹಾಜರಾಗಬೇಕು.

೭. ಪಿಎಚ್.ಡಿ ಪದವಿ ಪ್ರವೇಶಕ್ಕೆ ರಾಷ್ಟ್ರೀಯ/ರಾಜ್ಯ ಮೀಸಲಾತಿ ನಿಯಮವನ್ನು ಕಟ್ಟುನಿಟ್ಟಾಗಿ ಪರಿಪಾಲಿಸಲಾಗುವುದು.

**೬. ಅಧ್ಯಯನದ ಅವಧಿ**

ಪಿಎಚ್.ಡಿ. ಅಧ್ಯಯನಕ್ಕೆ ಕನಿಷ್ಠ ಅವಧಿಯು ನೋಂದಣಿ ದಿನಾಂಕದಿಂದ ಎರಡು ವರ್ಷ ಮತ್ತು ಗರಿಷ್ಠ ನಾಲ್ಕು ವರ್ಷಗಳು. ಒಂದು ವರ್ಷ ಅವಧಿ ವಿಸ್ತರಣೆಗೆ ಅವಕಾಶವಿರುತ್ತದೆ. ಅಭ್ಯರ್ಥಿಯು ಮಾರ್ಗದರ್ಶಕರ ಮೂಲಕ ವಿಭಾಗ ಸಮಿತಿಯ ಶಿಫಾರಸ್ಸಿನೊಂದಿಗೆ ವಿಸ್ತರಣೆ ಕೋರಬೇಕು. ವಿಸ್ತರಣೆಗೆ ನೀಡಿದ ವಿವರಣೆಗಳು ಸಕಾರಣವಾಗಿದ್ದರೆ ಕುಲಪತಿಗಳು ವಿಸ್ತರಣೆಗೆ ಅನುಮೋದನೆ ನೀಡಬಹುದು.

**೭. ತಾತ್ಕಾಲಿಕ ನೋಂದಣಿ**

೧. ಅಧ್ಯಯನಕ್ಕೆ ಆಯ್ಕೆಯಾದವರು ತಮ್ಮ ಮಾರ್ಗದರ್ಶಕರನ್ನು ಆಯ್ದುಕೊಂಡು ಪ್ರಸ್ತಾವದೊಂದಿಗೆ ತಾತ್ಕಾಲಿಕ ನೋಂದಣಿಗೆ ಅರ್ಜಿ ಸಲ್ಲಿಸಬೇಕು. ಅಭ್ಯರ್ಥಿಯು ತನ್ನ ಪಿಎಚ್.ಡಿ. ಅಧ್ಯಯನ ಪ್ರಬಂಧದ ಶೀರ್ಷಿಕೆಯನ್ನು ಮತ್ತು ಮಾರ್ಗದರ್ಶಕರ ಹೆಸರನ್ನು ಅವರ ಸಹಿಯೊಂದಿಗೆ ನೋಂದಣಿ ಅರ್ಜಿಯಲ್ಲಿ ಸೂಚಿಸಬೇಕು. ಪಿಎಚ್.ಡಿ. ಅಧ್ಯಯನ ಪ್ರಬಂಧದ ಪ್ರಕರಣಗಳನ್ನು ವಿಭಜಿಸಿ ವಿವರವಾದ ಸಾರಲೇಖವನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು. ಇದರಲ್ಲಿ ಒಂದು ಇಂಗ್ಲೀಷ್‌ನಲ್ಲಿರುವುದು ಕಡ್ಡಾಯ. ಅಂತರಶಿಸ್ತೀಯ ಅಧ್ಯಯನ ಸಂದರ್ಭದಲ್ಲಿ ಮಾರ್ಗದರ್ಶಕರ ಒಪ್ಪಿಗೆಯೊಂದಿಗೆ ಸಹಮಾರ್ಗದರ್ಶಕರನ್ನು ಗೊತ್ತುಮಾಡಿ ಕೊಳ್ಳಬಹುದು. ಅದಕ್ಕೆ ಸಹ ಮಾರ್ಗದರ್ಶಕರ ಒಪ್ಪಿಗೆ ಹಾಗೂ ಸಹಿ ಅಗತ್ಯ.

೨. ಮೊದಲ ಆರು ತಿಂಗಳುಗಳವರೆಗೆ ಅಭ್ಯರ್ಥಿಯ ನೋಂದಣಿ ತಾತ್ಕಾಲಿಕವಾಗಿರುತ್ತದೆ.

೩. ಪ್ರವೇಶದ ನಂತರ ಅಭ್ಯರ್ಥಿಗಳು ಪಿಎಚ್.ಡಿ.ಗೆ ಅವಶ್ಯಕತೆ ಹಾಗೂ ಅಗತ್ಯಕ್ಕೆ ತಕ್ಕಂತೆ ಕನಿಷ್ಠ ಒಂದು ಸೆಮಿಸ್ಟರ್ ಅವಧಿಗೆ ಅಧ್ಯಯನ ಕಾರ್ಯವನ್ನು ಕೈಗೊಳ್ಳುವುದು ಒಂದು ಮುಖ್ಯ ಚಟುವಟಿಕೆಯಾಗಿದೆ. ಈ ಅಧ್ಯಯನ ಕಾರ್ಯವನ್ನು ಪಿಎಚ್.ಡಿ. ಪದವಿಯ ಪೂರ್ವ ಸಿದ್ಧತೆಯೆಂದು ಪರಿಗಣಿಸಲಾಗುವುದು. ಅಭ್ಯರ್ಥಿಯ ಈ ಪಠ್ಯ ಕಾರ್ಯದಲ್ಲಿ ರಿಸರ್ಚ್ ಮೆಥಡಾಲಾಜಿ, ಮಾನಸಿಕ ಸಾಮರ್ಥ್ಯ ಮತ್ತು ಕಂಪ್ಯೂಟರ್ ಬಳಕೆಯ ವಿಷಯಗಳೂ ಒಳಗೊಂಡಿರಬೇಕು. ಅಭ್ಯರ್ಥಿಯು ಯಶಸ್ವಿಯಾಗಿ ಅಧ್ಯಯನ ಕಾರ್ಯ ಪೂರೈಸಿದ ನಂತರ ಪಿಎಚ್.ಡಿ. ಅಧ್ಯಯನಕ್ಕೆ ಖಾಯಂ ನೋಂದಣಿಯನ್ನು ನೀಡಲಾಗುವುದು.

**೮. ಸಂಶೋಧನಾ ಕಮ್ಮಟ**

**೮.೧ ಕಮ್ಮಟದ ತಾಂತ್ರಿಕ ಸ್ವರೂಪ**

೧. ಅಭ್ಯರ್ಥಿಯು ಕಮ್ಮಟಗಳ ಎಲ್ಲಾ ಹಂತಗಳಲ್ಲಿ ಭಾಗವಹಿಸುವುದು ಕಡ್ಡಾಯ

೨. ಕಮ್ಮಟದ ದಿನ ಅಭ್ಯರ್ಥಿಗಳು ಅಧ್ಯಯನಾಂಗಕ್ಕೆ ಬಂದು ವರದಿ ಮಾಡಿಕೊಳ್ಳಬೇಕು.

೩. ಪಿಎಚ್.ಡಿ. ಅಧ್ಯಯನದ ಭಾಗವಾಗಿ ಕೋರ್ಸ್‌ವರ್ಕ್ ಕಡ್ಡಾಯವಾಗಿರುವುದರಿಂದ ಪ್ರಸ್ತುತ ಕೋರ್ಸ್ ಸ್ವರೂಪದೊಂದಿಗೆ ಕಮ್ಮಟಗಳಿಗನುಗುಣವಾಗಿ ಒಟ್ಟು ೫೦ ಗುಣಾಂಕ(ಕ್ರೆಡಿಟ್)ಗಳನ್ನು ನಿಗದಿ ಪಡಿಸಲಾಗಿದೆ.

೪. ಶ್ರವಣ/ವಾಚನಕ್ಕೆ ೧೦ ಅಂಕಗಳು. ಈ ಗುಣಾಂಕಗಳಲ್ಲಿ ಉತ್ತಮ ೦೮, ಮಧ್ಯಮ ೦೫, ಸಾಮಾನ್ಯ ೦೪ ಎನ್ನುವ ಶ್ರೇಣಿಗಳಿರುತ್ತವೆ. ಸಂಶೋಧನೆ ಕ್ಷೇತ್ರಕ್ಕೆ ಈಚೆಗೆ ಬಂದಿರುವ ಪ್ರಮುಖ ಕೃತಿಗಳನ್ನು ಪರಾಮರ್ಶನ ಗ್ರಂಥಗಳನ್ನು ವಿದ್ಯಾರ್ಥಿ ಗಮನಕ್ಕೆ ಮಾರ್ಗದರ್ಶಕರು ತಂದು ಓದಲು ಸೂಚಿಸಬೇಕು. ಇದರ ಆಧಾರದಲ್ಲಿ ವಿದ್ಯಾರ್ಥಿಯು ಮಾಡಿಕೊಳ್ಳುವ ಟಿಪ್ಪಣಿ, ವಿಷಯದ ಗ್ರಹಿಕೆ, ಅಧ್ಯಯನದೊಂದಿಗಿನ ಬದ್ಧತೆಗಳನ್ನು ಗಮನಿಸಿ ಮಾರ್ಗದರ್ಶಕರು ಅಂಕಗಳನ್ನು ನೀಡಬೇಕು.

೫. ಎರಡನೆಯ ಕಾಲಂನಲ್ಲಿ ನಾಲ್ಕು ಹಂತದ ಅಧ್ಯಯನ ಕಮ್ಮಟದಲ್ಲಿ ಭಾಗವಹಿಸುವ ಹಾಗೂ ಅಭ್ಯರ್ಥಿಯು ತೋರಿಸುವ ಅಧ್ಯಯನ ಆಸಕ್ತಿ ಹಾಗೂ ತೊಡಗಿಕೊಳ್ಳುವ ಕ್ರಮದ ಮೇಲೆ ೨೦ ಅಂಕಗಳನ್ನು ನೀಡಬೇಕು. ಕಮ್ಮಟದ ಬಗ್ಗೆ ಅಭ್ಯರ್ಥಿ ವಿಮರ್ಶಾತ್ಮಕವಾದ ವರದಿಯನ್ನು ಮೇಲ್ವಿಚಾರಕರಿಗೆ ನೀಡಬೇಕು. ಇದೂ ಅಲ್ಲದೆ ವಿಶ್ವವಿದ್ಯಾಲಯ ಅಥವಾ ವಿಭಾಗವು ನಡೆಸುವ ವಿಚಾರ ಸಂಕಿರಣದಲ್ಲಿ ವಿದ್ಯಾರ್ಥಿಯು ಸಕ್ರಿಯವಾಗಿ ಭಾಗವಹಿಸಬೇಕು. ಇದರ ಹೊರತಾಗಿಯೂ ಬೇರೆ ಬೇರೆ ಅಕಾಡೆಮಿಕ್ ಸಂಸ್ಥೆಗಳು ನಡೆಸುವ ಸಂವಾದ/ವಿಚಾರ ಸಂಕಿರಣಗಳಲ್ಲಿ ವಿದ್ಯಾರ್ಥಿ ಭಾಗವಹಿಸಿದ್ದನ್ನು ಆಧರಿಸಿ ಈ ಅಂಕಗಳನ್ನು ನೀಡಬಹುದು.

೬. ಕಮ್ಮಟಗಳಿಗೆ ವಿದ್ಯಾರ್ಥಿಯು ಹಾಜರಾಗುವುದು ಕಡ್ಡಾಯ. ಇದಕ್ಕೆ ೧೦ ಗುಣಾಂಕಗಳು. ವಿದ್ಯಾರ್ಥಿಯ ನೇರ ಹಾಜರಾತಿಯೊಂದಿಗೆ ಆಧುನಿಕ ಸಂವಹನ ಮಾಧ್ಯಮಗಳ ಮೂಲಕವೂ ವಿದ್ಯಾರ್ಥಿ ಮಾರ್ಗದರ್ಶಕರು ಹಾಗೂ ವಿಭಾಗದೊಂದಿಗೆ ಹೊಂದುವ ನಿಕಟ ಸಂಪರ್ಕವನ್ನು ಆಧರಿಸಿ ಈ ಅಂಕ ನೀಡುವುದು.

೭. ಕೊನೆ ಹಂತದ ಕಮ್ಮಟ ೧೦ ಗುಣಾಂಕಗಳದ್ದಾಗಿರುತ್ತದೆ. ಅಧ್ಯಯನದ ಶೀರ್ಷಿಕೆ ಸಾರಲೇಖವನ್ನು ಆಧರಿಸಿ ಈ ಗುಣಾಂಕವನ್ನು ನೀಡಬಹುದಾಗಿದೆ.

**೮.೨. ಕಮ್ಮಟದ ಶೈಕ್ಷಣಿಕ ಸ್ವರೂಪ**

೧. ಕಮ್ಮಟವು ವಿದ್ಯಾರ್ಥಿ ತಾತ್ಕಾಲಿಕ ನೋಂದಣಿ ಪಡೆದ ಮೊದಲ ವಾರದಲ್ಲಿ ನಡೆಯುತ್ತದೆ.

೨. ಎಲ್ಲಾ ಕಮ್ಮಟಗಳಲ್ಲಿ ವಿದ್ಯಾರ್ಥಿ ಮತ್ತು ಮಾರ್ಗದರ್ಶಕರು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ.

೩. ಕಮ್ಮಟದ ಸ್ವರೂಪವು ೬ + ೪ + ೪ + ೬ ಹೀಗೆ ಒಟ್ಟು ನಾಲ್ಕು ಹಂತದಲ್ಲಿ ೨೦ ದಿನಗಳ ಕಾಲ ಇರುತ್ತದೆ. ಅಂದರೆ ತಾತ್ಕಾಲಿಕ ನೋಂದಣಿಯಾದ ಮೊದಲ ವಾರದಲ್ಲಿ ಆರು ದಿನಗಳು ಮೊದಲ ಕಮ್ಮಟ, ನಂತರ ಎರಡು ತಿಂಗಳು ಕಳೆದ ಮೇಲೆ ನಾಲ್ಕು ದಿವಸ ಮೊದಲ ಮಧ್ಯಂತರ ಕಮ್ಮಟ, ನಂತರ ಎರಡು ತಿಂಗಳಾದ ಮೇಲೆ ನಾಲ್ಕು ದಿನಗಳ ಎರಡನೇ ಮಧ್ಯಂತರ ಕಮ್ಮಟ, ನಂತರ ಎರಡು ತಿಂಗಳಾದ ಮೇಲೆ ಆರು ದಿನದ ಕೊನೆಯ ಕಮ್ಮಟವಿರುತ್ತದೆ.

೪. ಮೊದಲ ಕಮ್ಮಟದ ಮೊದಲ ದಿನ ಉದ್ಘಾಟನೆ ಸಮಾರಂಭ ಹಾಗೂ ಕೊನೆ ಕಮ್ಮಟದ ಸಮಾರೋಪ ಸಮಾರಂಭವನ್ನು ಅಧ್ಯಯನಾಂಗವು ನಡೆಸುತ್ತದೆ. ನಂತರ ಅವಧಿಗಳನ್ನು ಅಭ್ಯರ್ಥಿಗಳು ಆಯಾ ವಿಭಾಗಗಳಲ್ಲಿ ನಡೆಯುವ ತರಬೇತಿ ಹಾಗೂ ಚರ್ಚೆಗಳಲ್ಲಿ ಭಾಗವಹಿಸುತ್ತಾರೆ.

**೮.೩. ಮೊದಲ ಆರು ದಿನದ ಕಮ್ಮಟದಲ್ಲಿ ಕಲಿಸುವ ಸಂಭವನೀಯ ಸಂಗತಿಗಳು**

೧. ಸಂಶೋಧನೆ ಎಂದರೇನು? ಆ ಕುರಿತ ಸಂಭವನೀಯ ಪರಿಕಲ್ಪನೆಗಳು ಮತ್ತು ಪ್ರಶ್ನೆಗಳ ಕುರಿತ ಚರ್ಚೆ. ಸಂಶೋಧನೆ ವೈಧಾನಿಕತೆ ಅಗತ್ಯ – ಮಹತ್ವ

೨. ವಿದ್ಯಾರ್ಥಿಯ ಅಧ್ಯಯನ ವಿಷಯಕ್ಕೆ ಸಂಬಂಧಿಸಿದ ಕ್ಷೇತ್ರ ಪರಿಚಯ ಹಾಗೂ ಪುಸ್ತಕಗಳ/ಲೇಖನಗಳ ಸಮೀಕ್ಷೆ

೩. ವಿಷಯದ ಸಮಸ್ಯೀಕರಣ ಹಾಗೂ ಸಾರಲೇಖ ಸಿದ್ಧಪಡಿಸುವ ವಿಧಾನ

೪. ಸಂಶೋಧನ ಪರಿಭಾಷೆಗಳ ಪರಿಚಯ.

೫. ಸಂಶೋಧನಾ ಓದು (ರಿಸರ್ಚ್ ರೀಡಿಂಗ್) ಹಾಗೂ ಸಂಶೋಧನಾ ಟಿಪ್ಪಣಿ (ರಿಸರ್ಚ್ ನೋಟ್ಸ್)ಗಳನ್ನು ಮಾಡಿಕೊಳ್ಳುವ ಕ್ರಮ.

೬. ಸಂಶೋಧನೆಗೆ ಪೂರಕವಾಗಿ ಕಂಪ್ಯೂಟರ ಬಳಕೆಯ ಅಭ್ಯಾಸ.

**೮.೪. ಮೊದಲ ಮಧ್ಯಂತರ ಕಮ್ಮಟ**

ಇದು ಮೊದಲ ಕಮ್ಮಟವಾದ ಕನಿಷ್ಠ ಎರಡು ತಿಂಗಳ ಅಂತರದಲ್ಲಿ ನಡೆಯುತ್ತದೆ. ಈ **ನಾಲ್ಕು ದಿನದ** ಕಮ್ಮಟದಲ್ಲಿ ಮುಖ್ಯವಾಗಿ–

೧. ಸಂಶೋಧನೆಗೆ ಪೂರಕವಾಗಿ ಕಂಪ್ಯೂಟರ ಬಳಕೆಯ ಅಭ್ಯಾಸ.

೨. ಮೊದಲ ಕಮ್ಮಟದಲ್ಲಿ ಕಲಿಸಿಕೊಟ್ಟ ಸಂಶೋಧನಾ ವೈಧಾನಿಕತೆಗಳ ಕುರಿತು ಪುನರ್ ವಿಮರ್ಶೆ ನಡೆಸುವುದು.

೩. ಪಿಎಚ್.ಡಿ. ವಿಷಯಕ್ಕೆ ಸಂಬಂಧಿಸಿದ ಪ್ರಸ್ತಾವದ ಕರಡು ಪ್ರತಿಯನ್ನು ವಿದ್ಯಾರ್ಥಿ ವಿಭಾಗಕ್ಕೆ/ ಮಾರ್ಗದರ್ಶಕರಿಗೆ ಸಲ್ಲಿಸುವುದು.

೪. ಅಭ್ಯರ್ಥಿ ಆಯ್ಕೆ ಮಾಡಿಕೊಂಡ ಕ್ಷೇತ್ರಕ್ಕೆ ಸಂಬಂಧಿಸಿದ ಯಾವುದಾದರೊಂದು ಪುಸ್ತಕ/ ಲೇಖನವೊಂದರ ಕುರಿತು ವಿಮರ್ಶೆ ಬರೆಯುವುದು.

೫. ಅಭ್ಯರ್ಥಿ ಆಯ್ಕೆ ಮಾಡಿಕೊಂಡ ಕ್ಷೇತ್ರಕ್ಕೆ ಸಂಬಂಧಿಸಿದ ಯಾವುದಾದರೊಂದು ಪಿಎಚ್.ಡಿ. ಪ್ರಬಂಧವೊಂದರ ವಿಮರ್ಶೆ ಮಾಡುವುದು.

**೮.೫. ಎರಡನೆಯ ಮಧ್ಯಂತರ ಕಮ್ಮಟ**

ಇದು **'ನಾಲ್ಕು ದಿನದ'** ಕಮ್ಮಟವಾಗಿರುತ್ತದೆ. ಎರಡನೆಯ ಕಮ್ಮಟದ ನಂತರದ ಎರಡು ತಿಂಗಳಲ್ಲಿ ಈ ಕಮ್ಮಟ ಜರುಗುತ್ತದೆ. ಇದರಲ್ಲಿ ಮುಖ್ಯವಾಗಿ–

೧. ಸಾರಲೇಖದ ಪರಿಷ್ಕಾರ ನಡೆಯುತ್ತದೆ.

೨. ಕ್ಷೇತ್ರಕ್ಕೆ ಸಂಬಂಧಿಸಿದ ಪಿಎಚ್.ಡಿ. ಪ್ರಬಂಧದ ವೈಧಾನಿಕತೆ ಕುರಿತ ವಿಮರ್ಶೆ ನಡೆಯುತ್ತದೆ.

**೮.೬. ಅಂತಿಮ ಕಮ್ಮಟ**

ಎರಡನೆಯ ಮಧ್ಯಂತರ ಕಮ್ಮಟ ನಡೆದ ಎರಡು ತಿಂಗಳ ನಂತರ **'ಆರು ದಿನದ'** ಈ ಅಂತಿಮ ಕಮ್ಮಟ ನಡೆಯುತ್ತದೆ.

೧. ಅಭ್ಯರ್ಥಿ ಆಯ್ಕೆ ಮಾಡಿಕೊಂಡ ಕ್ಷೇತ್ರಕ್ಕೆ ಸಂಬಂಧಿಸಿದ ಯಾವುದಾದರೊಂದು ಪಿಎಚ್.ಡಿ. ಪ್ರಬಂಧವೊಂದರ ವಿಮರ್ಶೆ ಮಾಡುವುದು.

೨. ಪ್ರಬಂಧ ಸಿದ್ಧತೆಯ ತಾಂತ್ರಿಕ ಸಂಗತಿಗಳಾದ ಉಲ್ಲೇಖ, ಕೊನೆ ಟಿಪ್ಪಣಿ, ಅಡಿಟಿಪ್ಪಣಿ, ಗ್ರಂಥಸೂಚಿ ಹಾಗೂ ಅನುಬಂಧ ನೀಡಿಕೆ ವಿಧಾನಗಳ ಕುರಿತು ಕಲಿಕೆ.

೩. ಕ್ಷೇತ್ರಕಾರ್ಯ, ಬರವಣಿಗೆ ಕೌಶಲ್ಯ, ಉಲ್ಲೇಖ, ಅಡಿಟಿಪ್ಪಣಿಗಳಂಥ ತಾಂತ್ರಿಕ ಸಂಗತಿಗಳ ಕುರಿತ ಚರ್ಚೆ ನಡೆಯುತ್ತದೆ.

೪. ಸಹ ಸಂಬಂಧ ಹೊಂದಿದ ವಿಭಾಗ ಅಥವಾ ನಿಕಾಯಗಳ ವಿದ್ಯಾರ್ಥಿ ಹಾಗೂ ಅಧ್ಯಾಪಕರು ಪರಸ್ಪರ ಅನುಸಂಧಾನ ನಡೆಸುವುದು.

೫. ಅಂತರ್‌ಶಿಸ್ತೀಯ ಹಾಗೂ ಬಹುಶಿಸ್ತೀಯ ವಿಧಾನಗಳ ಕುರಿತು ಚರ್ಚೆ ನಡೆಯುತ್ತದೆ.

೬. ಕಮ್ಮಟದ ಕೊನೆಗೆ ಅಭ್ಯರ್ಥಿಯು ತೃಪ್ತಿಕರವಾದ ಅಧ್ಯಯನ ಪ್ರಸ್ತಾವವನ್ನು ಸಿದ್ಧಗೊಳಿಸಬೇಕು. ಒಂದು ವೇಳೆ ಆರು ತಿಂಗಳ ಈ ಅವಧಿಯಲ್ಲಿ ಅಭ್ಯರ್ಥಿಯು ತೃಪ್ತಿಕರವಾದ ಅಧ್ಯಯನ ಪ್ರಸ್ತಾವವನ್ನು ಸಿದ್ಧಪಡಿಸಲು ವಿಫಲನಾದರೆ ಅವರಿಗೆ ಮತ್ತೆ ಆರು ತಿಂಗಳ ಅವಧಿಯ ಕೋರ್ಸ್‌ವರ್ಕ್‌ನ್ನು ಅನುಭವಿಸುವ ಅವಕಾಶ ನೀಡಲಾಗುವುದು. ಎರಡನೇ ಬಾರಿಯೂ ಅಭ್ಯರ್ಥಿಯು ತೃಪ್ತಿಕರವಾದ ಪ್ರಸ್ತಾವವನ್ನು ಸಿದ್ಧಪಡಿಸಲು ವಿಫಲನಾದರೆ ಅವರು ಪುನಃ ಪ್ರವೇಶ ಪರೀಕ್ಷೆ ಬರೆದು ಕೋರ್ಸ್‌ವರ್ಕ್‌ಗೆ ಹಾಜರಾಗುವ ಅರ್ಹತೆಯನ್ನು ಪಡೆಯಬೇಕು.

೭. ಮಾರ್ಗದರ್ಶಕರ ಮೂಲಕ ಅಂತಿಮ ಸಾರಲೇಖದ ಸಲ್ಲಿಕೆಯಾಗುತ್ತದೆ.

**೮.೭.** ಮಹಾಪ್ರಬಂಧವನ್ನು ರಚಿಸುವಾಗ ಪಾಲಿಸಬೇಕಾದ ತಾಂತ್ರಿಕ ಸಂಗತಿಗಳಾದ ಅಧ್ಯಾಯಗಳ ವರ್ಗೀಕರಣ, ಉಲ್ಲೇಖಗಳನ್ನು ಕೊಡುವ ರೀತಿ, ಗ್ರಂಥಸೂಚಿ, ಅನುಬಂಧ, ಕ್ಷೇತ್ರಕಾರ್ಯ, ಮಾಹಿತಿ ಕ್ರೋಢೀಕರಣ, ಪ್ರಶ್ನಾವಳಿ ಸಿದ್ಧತೆ ಇತ್ಯಾದಿ ಸಂಶೋಧನ ಚಟುವಟಿಕೆಗಳನ್ನು ಕಮ್ಮಟದಲ್ಲಿ ತಿಳಿಸಬೇಕು. ತಾತ್ವಿಕ ಸ್ವರೂಪ ಎಂದರೆ ಮಾಹಿತಿ ಪ್ರಧಾನಕ್ಕಿಂತ ವಿಶ್ಲೇಷಣೆ ಪ್ರಧಾನವಾಗಿಯೂ ಹಾಗೂ ಒಳನೋಟಗಳಿಂದ ಕೂಡಿರುವಂತೆ ಮಹಾಪ್ರಬಂಧದ ವಿಷಯವನ್ನು ಆಯ್ಕೆ ಮಾಡಬೇಕು.

**೮.೮.** ಕನ್ನಡ ವಿಶ್ವವಿದ್ಯಾಲಯದ ಅಧ್ಯಯನ ವಿಧಾನದ ವಿಶಿಷ್ಟತೆ, ಬಹುಶಿಸ್ತೀಯತೆ ನಿರ್ಲಕ್ಷಿತ ಕ್ಷೇತ್ರಕ್ಕೆ ಪ್ರಾಧಾನ್ಯತೆ ನೀಡುವುದು, ದೇಶೀಯ ಮತ್ತು ಪ್ರಗತಿಪರ ದೃಷ್ಟಿಕೋನಗಳನ್ನು ಸಂಶೋಧನ ಅಧ್ಯಯನವು ಪ್ರತಿಬಿಂಬಿಸುವಂತೆ ರೂಪಿಸುವ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ಅಂತಿಮ ಕಮ್ಮಟವನ್ನು ಪೂರ್ಣಗೊಳಿಸಿದ ಅನಂತರ ಹಿಂದಿನ ಆರು ತಿಂಗಳ ಅವಧಿಗೂ ಪೂರ್ವಾನ್ವಯವಾಗುವಂತೆ ಅಧಿಕೃತ ನೋಂದಣಿ ನೀಡಲಾಗುತ್ತದೆ.

**೯. ಅಧ್ಯಯನ ಪ್ರಬಂಧದಲ್ಲಿ ಮಾರ್ಪಾಡು**

ಅವಶ್ಯವೆನಿಸಿದಲ್ಲಿ ಮಹಾಪ್ರಬಂಧದ ಶೀರ್ಷಿಕೆಯನ್ನು ಅಥವಾ ಸ್ವರೂಪವನ್ನು ವಿಷಯಕ್ಕೆ ಧಕ್ಕೆ ಬಾರದಂತೆ ತಾತ್ಕಾಲಿಕ ನೋಂದಣಿಯಾದ ಮೊದಲ ಒಂದು ವರ್ಷದಲ್ಲಿ ಮಾರ್ಗದರ್ಶಕರ ಸಮ್ಮತಿಯೊಂದಿಗೆ ಒಮ್ಮೆ ಮಾತ್ರ ಪರಿಷ್ಕರಿಸಿಕೊಳ್ಳಲು ಅವಕಾಶವಿರುತ್ತದೆ. ಒಂದು ವೇಳೆ ಅಂತಿಮ ಸಾರಲೇಖವನ್ನು ಸಲ್ಲಿಸುವ ಆರು ತಿಂಗಳ ಪೂರ್ವದಲ್ಲಿ ಶೀರ್ಷಿಕೆಯಲ್ಲಿ ಸ್ವಲ್ಪಮಟ್ಟಿನ (ಮೈನರ್ ಕರೆಕ್ಷನ್) ಮಾರ್ಪಾಡು ಅಥವಾ ಸೇರ್ಪಡೆ ಅವಶ್ಯವೆನಿಸಿದಲ್ಲಿ ಪಿಎಚ್.ಡಿ. ಸಮಿತಿಯ ಶಿಫಾರಸ್ಸಿನೊಂದಿಗೆ ಅಧ್ಯಯನಾಂಗಕ್ಕೆ ಸಲ್ಲಿಸಬೇಕು. ಈ ಎರಡೂ ಸಂದರ್ಭಗಳಲ್ಲಿ ಮಾನ್ಯ ಕುಲಪತಿಗಳ ಅನುಮತಿ ಪಡೆದು ಮಾರ್ಪಾಡು ಮಾಡಲು ಅವಕಾಶ ನೀಡಬಹುದು. ಮೊದಲಿನ ವಿಷಯ ಶೀರ್ಷಿಕೆಯನ್ನು ಕೈಬಿಟ್ಟು ಹೊಸ ವಿಷಯ, ಹೊಸ ಶೀರ್ಷಿಕೆಯಿಂದ ಅಭ್ಯಾಸ ಮುಂದುವರಿಸಬೇಕೆನ್ನುವವರು ಮತ್ತೆ ಹೊಸದಾಗಿ ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ.

## ೧೦. ಶುಲ್ಕದ ವಿವರ

| ಕ್ರ.ಸಂ. | ಶುಲ್ಕ ವಿವರ | ಮೊತ್ತ |
|---|---|---|
| ೦೧. | ಅರ್ಜಿ ಶುಲ್ಕ | ೫೦೦/- |
| ೦೨. | ನೋಂದಣಿ ಶುಲ್ಕ | ೨೦೦೦/- |
| ೦೩. | ಕಮ್ಮಟ ಶುಲ್ಕ | ೧೦೦೦/- |
| ೦೪. | ಅರ್ಧವಾರ್ಷಿಕ ಅಧ್ಯಯನ ಶುಲ್ಕ | ೨೦೦೦/- |
| ೦೫. | ಪ್ರಬಂಧ ಸಲ್ಲಿಕೆ/ಪರೀಕ್ಷೆ ಶುಲ್ಕ | ೭೦೦೦/- |
| ೦೬. | ಅವಧಿ ವಿಸ್ತರಣಾ ಶುಲ್ಕ (ಮೊದಲ ಆರು ತಿಂಗಳಿಗೆ) | ೩೦೦೦/- |
| ೦೭. | ಮರುನೋಂದಣಿ ಶುಲ್ಕ | ೩೦೦೦/- |
| ೦೮. | ಪ್ರಬಂಧ ಮರುಸಲ್ಲಿಕೆ ಶುಲ್ಕ | ೩೦೦೦/- |
| ೦೯. | ಘಟಿಕೋತ್ಸವ ಪ್ರಮಾಣ ಪತ್ರ (ಕನ್ನಡ ಮತ್ತು ಇಂಗ್ಲೀಷ್) | ೧೦೦೦/- |
| ೧೦. | ಮೌಲ್ಯಮಾಪನ ವರದಿ ಶುಲ್ಕ | ೫೦೦/- |
| ೧೧. | ಪ್ರಬಂಧ ಪ್ರಕಟಣೆ ಶುಲ್ಕ | ೧೦೦೦/- |
| ೧೨. | ಗ್ರಂಥಾಲಯ ಶುಲ್ಕ | ೧೦೦೦/- |
| ೧೩. | ಅಧ್ಯಯನ ಶುಲ್ಕದ ವಿಳಂಬ ಪಾವತಿ ದಂಡ (ಆರು ತಿಂಗಳ ಅವಧಿಗೆ) | ೧೦೦೦/- |

**ಪ.ಜಾ., ಪ.ಪಂ. ಪ್ರವರ್ಗ೧ ರ ಅಭ್ಯರ್ಥಿಗಳಿಗೆ ದಂಡ ಶುಲ್ಕವನ್ನು ಹೊರತುಪಡಿಸಿ ಎಲ್ಲಾ ಶುಲ್ಕಗಳಲ್ಲಿ ಶೇ.೫೦% ರಿಯಾಯಿತಿ ಇರುತ್ತದೆ.**

೧೦.೧. ಆರಂಭದಲ್ಲಿ ಅರ್ಜಿ ನಮೂನೆಯ ಖರೀದಿಗಾಗಿ ರೂ. ೫೦೦/-ಗಳನ್ನು ವಿಶ್ವವಿದ್ಯಾಲಯಕ್ಕೆ ತುಂಬಬೇಕು. ಅರ್ಜಿ ಸಲ್ಲಿಸಿದಾಕ್ಷಣಕ್ಕೆ ತಾವು ಆಯ್ಕೆಯಾದ ಅಭ್ಯರ್ಥಿ ಎಂದು ಭಾವಿಸುವಂತಿಲ್ಲ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಆಯ್ಕೆ ಪಟ್ಟಿಯಲ್ಲಿ ಹೆಸರು ಪ್ರಕಟವಾದ ನಂತರ ನೋಂದಣಿ ಶುಲ್ಕದ ಜೊತೆಗೆ ಮೊದಲ ಅರ್ಧವಾರ್ಷಿಕ ಶುಲ್ಕ ಕಟ್ಟಬೇಕು. ಬಳಿಕ ತಾತ್ಕಾಲಿಕ ನೋಂದಣಿ ಮಾಡಲಾಗುತ್ತದೆ.

೧೦.೨. ಅರ್ಜಿ ಶುಲ್ಕ ರೂ.೫೦೦/- ನೋಂದಣಿ ಶುಲ್ಕ ರೂ. ೨೦೦೦/- ಹಾಗೂ ಪಿಎಚ್.ಡಿ. ಅಧ್ಯಯನದ ಅರ್ಧವಾರ್ಷಿಕ ಶುಲ್ಕ ರೂ. ೨೦೦೦/- ರೂಪಾಯಿಗಳನ್ನು ಪ್ರಗತಿ ವರದಿಯೊಂದಿಗೆ ಪ್ರತಿವರ್ಷ ಜುಲೈ ಮತ್ತು ಜನವರಿ ತಿಂಗಳಿನಲ್ಲಿ ವಿಶ್ವವಿದ್ಯಾಲಯಕ್ಕೆ ಕಡ್ಡಾಯವಾಗಿ ಪಾವತಿಸಬೇಕು. ಮಹಾಪ್ರಬಂಧ ಸಲ್ಲಿಸುವಾಗ ಪಿಎಚ್.ಡಿ. ಪರೀಕ್ಷಾ ಶುಲ್ಕವಾಗಿ ರೂ. ೭,೦೦೦.೦೦ ಗಳನ್ನು ಪಾವತಿಸಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ಅಧ್ಯಯನ ಶುಲ್ಕದಲ್ಲಿ ನಿಯಮಾನುಸಾರ ರಿಯಾಯಿತಿಗೆ ಅವಕಾಶವಿರುತ್ತದೆ. ಘಟಿಕೋತ್ಸವ/ಪದವಿ ಪ್ರಕಟಣಾ ಶುಲ್ಕ ರೂ.೧೦೦೦ ಗಳನ್ನು ಪಾವತಿಸಬೇಕು.

೧೦.೩. ಪಿಎಚ್.ಡಿ ಅಧ್ಯಯನಕ್ಕೆ ಸಂಬಂಧಿಸಿದ ಯಾವುದೆ ಶುಲ್ಕ ಪಾವತಿ ಹಾಗೂ ಅಧ್ಯಯನ ವರದಿಗಳನ್ನು ಅಂಚೆಯ ಮೂಲಕ ಸಲ್ಲಿಸಲು ಅವಕಾಶವಿಲ್ಲ.

೧೦.೪. ಈ ಶುಲ್ಕವು ಕಾಲದಿಂದ ಕಾಲಕ್ಕೆ ವಿಶ್ವವಿದ್ಯಾಲಯ ತೀರ್ಮಾನಿಸಿದ ರೀತಿಯಲ್ಲಿ ಬದಲಾಗಬಹುದು. ಎಂದಿನಿಂದ ಹಾಗೆ ಬದಲಾವಣೆ ಆದೇಶ ಹೊರಡುತ್ತದೋ ಅಂದಿನಿಂದಲೇ ನಿಗಿದಪಡಿಸಿದ ಹೊಸ ರೂಪದ ಶುಲ್ಕವು ಎಲ್ಲಾ ವರ್ಗದ ಅಭ್ಯರ್ಥಿಗಳಿಗೂ ಅನ್ವಯಿಸುತ್ತದೆ.

## ೧೧. ಪ್ರಗತಿ ವರದಿ

೧. ಅಭ್ಯರ್ಥಿಯು ಪ್ರತಿ ಆರು ತಿಂಗಳಿಗೆ ಒಂದು ಸಲ (ಜನವರಿ ಮತ್ತು ಜುಲೈ) ಅಧ್ಯಯನದ ಪ್ರಗತಿಯನ್ನುನಿಗದಿತ ದಿನದಂದು ವಿಭಾಗದ ಪಿಎಚ್.ಡಿ. ಸಮಿತಿಯ ಮುಂದೆ ಸಮರ್ಥವಾಗಿ ಮಂಡಿಸಬೇಕು. ಅಲ್ಲಿ ಬರುವ ಸಲಹೆ ಸೂಚನೆಗಳನ್ನು ಅಳವಡಿಸಿಕೊಂಡು ಶುಲ್ಕ ಸಮೇತ ನಿರ್ದಿಷ್ಟ ನಮೂನೆಯಲ್ಲಿ ಮಾರ್ಗದರ್ಶಕರ ಶಿಫಾರಸ್ಸಿನೊಂದಿಗೆ ಮುಖ್ಯಸ್ಥರ ಮೂಲಕ ಅಧ್ಯಯನಾಂಗಕ್ಕೆ ಒಪ್ಪಿಸಬೇಕು. ಅಭ್ಯರ್ಥಿಯು ಅರ್ಧವಾರ್ಷಿಕ ಪ್ರಗತಿಯನ್ನು ಅನುಕ್ರಮವಾಗಿ ಹಾಗೂ ಕ್ರಮಬದ್ಧವಾಗಿ ಎರಡು ಅವಧಿಗಳಿಗೆ ಸಲ್ಲಿಸದಿದ್ದಾಗ ಅಥವಾ ಸಲ್ಲಿಸಿದ ವರದಿ ಸಮಾಧಾನಕರವಾಗಿಲ್ಲದ ಸಂದರ್ಭದಲ್ಲಿ ಪಿಎಚ್.ಡಿ. ಸಮಿತಿಯು ನೋಂದಣಿ ರದ್ದುಪಡಿಸಲು ಶಿಫಾರಸ್ಸು ಮಾಡಬಹುದು. ಜನವರಿಯಿಂದ ಜೂನ್ ನಡುವೆ ಅಥವಾ ಜುಲೈದಿಂದ ಡಿಸೆಂಬರ್ ನಡುವೆ ನೋಂದಣಿಯಾದ ಸಂದರ್ಭದಲ್ಲಿ ಅಭ್ಯರ್ಥಿಯು ಆ ಅವಧಿಯ ಆಂಶಿಕ ಪ್ರಗತಿ ವರದಿಯನ್ನು ಸಲ್ಲಿಸಬೇಕು.

೨. ಅಭ್ಯರ್ಥಿಯು ಸಲ್ಲಿಸುವ ಪ್ರಗತಿ ವರದಿ ೧೦ ಪುಟಗಳಿಗೆ ಕಡಿಮೆಯಿಲ್ಲದಂತೆ ಇರುವುದು ಕಡ್ಡಾಯ. ಅಭ್ಯರ್ಥಿಯು ಅದುವರೆಗೆ ಕೈಗೊಂಡ ಅಧ್ಯಯನದ ಸಮರ್ಥನೆಯ ಸ್ವರೂಪದಲ್ಲಿ ಆ ವರದಿ ಇರಬೇಕು ಮತ್ತು ಅದು ಇಂದಿನ ವರದಿಯ ನಂತರ ಮಾಡಿದ ಮುಂದಿನ ಅಧ್ಯಯನ ವರದಿಯಾಗಿರಬೇಕು.

**೧೧. ಮಾರ್ಗದರ್ಶಕರು**

ಯುಜಿಸಿಯ ನಿಯಮಾನುಸಾರ ಮಾರ್ಗದರ್ಶಕರ ಅರ್ಹತೆ ಈ ಕೆಳಕಂಡಂತೆ ಇದೆ.

**೧೧.೧. ಅರ್ಹತೆ**

ಅ. ಯು.ಜಿ.ಸಿ. ಮಾರ್ಗದರ್ಶಿಯಂತೆ ನಿವೃತ್ತ ಅಧ್ಯಾಪಕರಿಗೆ ಪಿಎಚ್.ಡಿ. ಮಾರ್ಗದರ್ಶನಕ್ಕೆ ಅವಕಾಶವಿರುವುದಿಲ್ಲ.

ಆ. ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಪಿಎಚ್.ಡಿ. ಪಡೆದ ಪ್ರವಾಚಕರು ಮತ್ತು ಪಿಎಚ್.ಡಿ. ಪಡೆದು ಐದು ವರ್ಷ ಸಂಶೋಧನ ಹಾಗೂ ಬೋಧನ ಅನುಭವ ಪಡೆದ ಖಾಯಂ ಅಧ್ಯಾಪಕರು ಪಿಎಚ್.ಡಿ ಅಧ್ಯಯನಕ್ಕೆ ಮಾರ್ಗದರ್ಶಕರಾಗಲು ಹಾಗೂ ಸಹಮಾರ್ಗದರ್ಶಕರಾಗಲು ಅರ್ಹರು. ಇವರು ಸಂಶೋಧನೆ, ಬೋಧನೆ ಹಾಗೂ ಪ್ರಕಟಣೆಯಲ್ಲಿ ನಿರಂತರ ತೊಡಗಿಕೊಂಡಿರುವುದು ಅವಶ್ಯ.

೧೧.೨. ಬಹುಶಿಸ್ತೀಯ ಅಧ್ಯಯನದ ಸಂದರ್ಭದಲ್ಲಿ ಅಭ್ಯರ್ಥಿಗೆ ಒಬ್ಬ ಮಾರ್ಗದರ್ಶಕರು ಹಾಗೂ ಮತ್ತೊಬ್ಬ ಸಹ ಮಾರ್ಗದರ್ಶಕರಾಗಿರುತ್ತಾರೆ. ಸಹಮಾರ್ಗದರ್ಶಕರು ಮಾರ್ಗದರ್ಶಕರಿಗೆ ನಿಗದಿತವಾದ ಎಂಟು ಸೀಟುಗಳಲ್ಲಿಯೇ ಸಹಮಾರ್ಗದರ್ಶನಕ್ಕೆ ಒಪ್ಪಿಕೊಳ್ಳಬೇಕು.

೧೧.೩. ನೋಂದಣಿಯಾದ ಎರಡು ವರ್ಷಗಳೊಳಗೆ ಅಭ್ಯರ್ಥಿಯು ಇಚ್ಛಿಸಿದಲ್ಲಿ ಮಾರ್ಗದರ್ಶಕರ ಒಪ್ಪಿಗೆಯೊಂದಿಗೆ ಪಿಎಚ್.ಡಿ. ಸಮಿತಿ ಹಾಗೂ ವಿಶ್ವವಿದ್ಯಾಲಯ ಅನುಮತಿಯೊಂದಿಗೆ ಮಾರ್ಗದರ್ಶಕರ ಬದಲಾವಣೆಗೆ ಅವಕಾಶ ನೀಡಬಹುದು. ವಿಶೇಷ ಸಂದರ್ಭದಲ್ಲಿ ಕುಲಪತಿಯವರು ಎರಡು ವರ್ಷಗಳ ನಂತರವೂ ಅಭ್ಯರ್ಥಿಯ ಶೈಕ್ಷಣಿಕ ಹಿತಾಸಕ್ತಿಯನ್ನು ರಕ್ಷಿಸುವ ಉದ್ದೇಶದಿಂದ ಮಾರ್ಗದರ್ಶಕರ ಬದಲಾವಣೆಗೆ ಅನುಮತಿಯನ್ನು ನೀಡಬಹುದು.

**೧೨. ವಿಷಯ ಮತ್ತು ಅಭ್ಯರ್ಥಿಗಳ ಹಂಚಿಕೆ**

೧. ಕನ್ನಡ ವಿಶ್ವವಿದ್ಯಾಲಯದ ಯಾವ ಯಾವ ವಿಭಾಗಗಳಲ್ಲಿ ಯಾವ ಯಾವ ವಿಷಯಗಳಿಗೆ ಮಾರ್ಗದರ್ಶನಮಾಡಲು ಮಾರ್ಗದರ್ಶಕರಿದ್ದಾರೋ ಹಾಗೂ ಯಾರಲ್ಲಿ ಅಭ್ಯರ್ಥಿಗಳನ್ನು ತುಂಬಿಕೊಳ್ಳಲು ಸ್ಥಾನಗಳಿವೆಯೋ ಅಂಥ ಕಡೆ ಮಾತ್ರ ಅಭ್ಯರ್ಥಿಗಳಿಗೆ ಅವಕಾಶವಿರುತ್ತದೆ. ಸಂದರ್ಶನದಲ್ಲಿ ಅಭ್ಯರ್ಥಿಯು ವ್ಯಕ್ತಪಡಿಸಿದ ಆಸಕ್ತ ವಿಷಯಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ವಿಷಯ ಪರಿಣಿತರ ಮೇರೆಗೆ ಸೀಟು ಹಂಚಿಕೆಯಾಗಬೇಕು. ಈ ಪ್ರಕ್ರಿಯೆಯು ಯಾವುದೇ ಅಭ್ಯರ್ಥಿಯ ಸ್ವ-ಇಚ್ಛೆಯಾಗಿರುವುದಿಲ್ಲ.

೨. ವಿಶ್ವವಿದ್ಯಾಲಯದ ಮಾರ್ಗದರ್ಶಕರಿಗೆ ಯಾವುದೇ ಸಂದರ್ಭದಲ್ಲೂ ಗರಿಷ್ಠ ೮ ಜನ ಪಿಎಚ್.ಡಿ. ಅಭ್ಯರ್ಥಿಗಳಿಗೆ ಮಾತ್ರ ಮಾರ್ಗದರ್ಶನ ಮಾಡಲು ಅವಕಾಶವಿರುತ್ತದೆ. ರಾಜ್ಯ ಸರಕಾರದ ಮೀಸಲಾತಿಯನ್ವಯ ಇವರಲ್ಲಿ ಒಬ್ಬರು ಮಹಿಳೆ, ಒಬ್ಬರು ಪ.ಜಾ, ಒಬ್ಬರು ಪ.ಪಂ, ಒಬ್ಬರು ಹಿಂದುಳಿದ ವರ್ಗಕ್ಕೆ ಸೇರಿದ ಅಭ್ಯರ್ಥಿಯಾಗಿರಬೇಕು. ಸಾಮಾನ್ಯ ಅಭ್ಯರ್ಥಿಗಳ ಸಂಖ್ಯೆ ಶೇ. ೫೦ಕ್ಕಿಂತ ಹೆಚ್ಚಿರಬಾರದು.

**೧೩. ಅಧ್ಯಯನ ಪ್ರಬಂಧದ ಸಲ್ಲಿಕೆ**

೧. ವಿಶ್ವವಿದ್ಯಾಲಯವು ನಿಗದಿಪಡಿಸಿದ ನಿರ್ದಿಷ್ಟ ಸಮಯದಲ್ಲಿ ಅಭ್ಯರ್ಥಿಯು ಅಧ್ಯಯನ ಪ್ರಬಂಧ ಸಲ್ಲಿಸುವುದು ಪ್ರಮುಖ ಶರತ್ತಾಗಿದೆ.

೨. ಆಯಾ ಅಭ್ಯರ್ಥಿಗಳು ತಮ್ಮ ಅಧ್ಯಯನ ಅವಧಿ ಮುಗಿಯುವ ಆರು ತಿಂಗಳು ಮೊದಲು ತಮ್ಮ ಪಿಎಚ್.ಡಿ. ಅಧ್ಯಯನ ಪ್ರಬಂಧದ ಕರಡು ಪ್ರತಿಯೊಂದನ್ನು ತಯಾರಿಸಬೇಕು. ಕರಡನ್ನು ಆಯಾ ವಿಭಾಗದ ಪಿಎಚ್.ಡಿ. ಸಮಿತಿ ಸಮ್ಮುಖದಲ್ಲಿ ಮಂಡಿಸಬೇಕು. ಸಮಿತಿಯು ನೀಡುವ ಉಪಯುಕ್ತ ಸಲಹೆ ಸೂಚನೆಗಳನ್ನು ಪ್ರಬಂಧದಲ್ಲಿ ಅಳವಡಿಸಬೇಕು. ನಂತರ ನಿಗದಿತ ಅವಧಿಯಲ್ಲಿ ಅಂತಿಮ ರೂಪದ ಪ್ರಬಂಧ ಸಲ್ಲಿಸಬೇಕು. ಚರ್ಚೆಯಲ್ಲಿ ವಿಭಾಗದ ಸಂಶೋಧನ ವಿದ್ಯಾರ್ಥಿಗಳೂ ಭಾಗವಹಿಸಬಹುದು.

೩. ಪಿಎಚ್.ಡಿ. ಅಭ್ಯರ್ಥಿಗಳು ಅಧ್ಯಯನ ಪ್ರಬಂಧವನ್ನು ಮಂಡಿಸುವ ಮುಂಚೆ ತಮ್ಮ ಸಂಶೋಧನ ವಿಷಯ ಕುರಿತು ಕನಿಷ್ಠ ಒಂದಾದರೂ ಅಧ್ಯಯನ ಲೇಖನವನ್ನು (Research Paper) ಸಂಶೋಧನ ನಿಯತಕಾಲಿಕೆಗಳಲ್ಲಿ (Refreed Journal) ಪ್ರಕಟಿಸಬೇಕು.

೪. ಅಧ್ಯಯನ ಪ್ರಬಂಧ ಸಲ್ಲಿಸುವ ಪೂರ್ವದಲ್ಲಿ ಕನಿಷ್ಠ ೩೦ ದಿನಗಳ ಮೊದಲು ಹತ್ತು ಪ್ರತಿಗಳ ಸಾರಲೇಖವನ್ನು (ಇದರಲ್ಲಿ ಎರಡು ಪ್ರತಿ ಇಂಗ್ಲಿಷ್‌ನಲ್ಲಿರಬೇಕು) ಸಂಬಂಧಿಸಿದ ವಿಭಾಗದ ಮೂಲಕ ಅಧ್ಯಯನಾಂಗಕ್ಕೆ ನೀಡಬೇಕು. ಸಾರಲೇಖವನ್ನು ಸಲ್ಲಿಸಿದ ೩೦ ದಿನಗಳೊಳಗಾಗಿ ಕ್ರಮಬದ್ಧವಾಗಿ ಪೂರ್ಣಗೊಳಿಸಿದ ಅಧ್ಯಯನ ಪ್ರಬಂಧದ ಡಿ.ಟಿ.ಪಿ. ರೂಪದ ೬ ಪ್ರತಿಗಳನ್ನು ಮಾರ್ಗದರ್ಶಕರ ದೃಢೀಕರಣ ಪತ್ರದೊಂದಿಗೆ ಮುಖ್ಯಸ್ಥರ ಮೂಲಕ ಅಧ್ಯಯನಾಂಗಕ್ಕೆ ಸಲ್ಲಿಸಬೇಕು. ಜೊತೆಗೆ ಅಂತಿಮ ಸಾರಲೇಖ ಹಾಗೂ ಪಿಎಚ್.ಡಿ ಅಧ್ಯಯನ ಪ್ರಬಂಧದ ಸಾಫ್ಟ್ ಕಾಪಿಯನ್ನು (ಸಿ.ಡಿ.ರೂಪದಲ್ಲಿ) ಅಧ್ಯಯನಾಂಗಕ್ಕೆ ಕಡ್ಡಾಯವಾಗಿ ಸಲ್ಲಿಸಬೇಕು. ಮಾರ್ಗದರ್ಶಕರು ಯಾರೇ ಆಗಿದ್ದರೂ ಆ ನಿಕಾಯದ ಯಾವ ವಿಭಾಗದಲ್ಲಿ ನೋಂದಣಿಯಾಗಿರುತ್ತದೋ ಅಲ್ಲಿಗೆ ಅಭ್ಯರ್ಥಿಯು ಅಧ್ಯಯನ ಪ್ರಬಂಧವನ್ನು ಸಲ್ಲಿಸಬೇಕು.

೫. **ಅಧ್ಯಯನ ಪ್ರಬಂಧದ ವಿನ್ಯಾಸ**

ಅಧ್ಯಯನ ಪ್ರಬಂಧವು ಎ೪ ಆಕಾರದಲ್ಲಿರಬೇಕು. ನುಡಿ ೧೪ ಪಾಯಿಂಟ್ ಅಕ್ಷರಗಳು ಮತ್ತು ಪ್ರತಿಪುಟಕ್ಕೆ ಕನಿಷ್ಟ ೩೦ ಸಾಲುಗಳು ಇರಬೇಕು. ೨೩ ಸೆಂ.ಮೀ. ಉದ್ದ, ೧೩ ಸೆಂ.ಮೀ ಅಗಲದಲ್ಲಿ ಡಿ.ಟಿ.ಪಿ. ಮಾಡಿರಬೇಕು. ಕನಿಷ್ಟ ೨೦೦ ಪುಟಗಳು ಇರಲೇಬೇಕು ಮತ್ತು ಗರಿಷ್ಠ ೩೦೦ ಪುಟವನ್ನು ದಾಟಕೂಡದು. ಅರಿಕೆ, ಅರ್ಪಣೆ, ಕೃತಜ್ಞತೆ ಪುಟಗಳು ಇರಕೂಡದು. ಅಡಿಟಿಪ್ಪಣಿಗಳು, ಪರಾಮರ್ಶನ ಗ್ರಂಥಗಳು ಇತ್ಯಾದಿ ಅಧ್ಯಯನಕ್ಕೆ ಪೂರಕವಾದ ಅನುಬಂಧಗಳು ಇರಬೇಕು. ಅಭ್ಯರ್ಥಿ ಮತ್ತು ಮಾರ್ಗದರ್ಶಕರ ಪ್ರಮಾಣ ಪತ್ರಗಳ ನಂತರ ಪರಿವಿಡಿ ಇರಬೇಕು. ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಅಧ್ಯಯನ ಪ್ರಬಂಧ ಎಂದು ನಮೂದಿಸಿರಬೇಕು. ಅಭ್ಯರ್ಥಿಯು ಈ ನಿಯಮವನ್ನು ಪಾಲಿಸಬೇಕು. ವಿಶೇಷ ಸಂದರ್ಭದಲ್ಲಿ ಪುಟಗಳ ಮಿತಿಯನ್ನು ಆಯಾ ವಿಭಾಗದ ಪಿಎಚ್.ಡಿ. ಸಮಿತಿ ನಿರ್ಧರಿಸಬಹುದಾಗಿದೆ.

## ೧೪. ಅಧ್ಯಯನ ಪ್ರಬಂಧದ ಮೌಲ್ಯಮಾಪನ

೧. ಮಾರ್ಗದರ್ಶಕರ ಶಿಫಾರಸ್ಸು ಮಾಡಿರುವ ವಿಭಾಗ ಅಧ್ಯಯನ ಮಂಡಳಿ ಅನುಮೋದಿಸಿರುವ ಅರ್ಹ ಹತ್ತು ಜನ ಬಾಹ್ಯ ತಜ್ಞ ಮೌಲ್ಯಮಾಪಕರ ಪಟ್ಟಿಯನ್ನು ಸಲ್ಲಿಸಬೇಕು. ಇದರಲ್ಲಿ ಕನಿಷ್ಠ ಇಬ್ಬರು ವಿಷಯ ತಜ್ಞರನ್ನು ಕುಲಪತಿ ಅವರು ಆಯ್ಕೆ ಮಾಡುತ್ತಾರೆ. ಕುಲಪತಿಗಳು ಆದ್ಯತಾನುಸಾರ ಆಯ್ಕೆ ಮಾಡಿದ ಇಬ್ಬರು ಮೌಲ್ಯಮಾಪಕರಿಗೆ ಅಧ್ಯಯನಾಂಗವು ಅಭ್ಯರ್ಥಿಯ ಸಾರಲೇಖವನ್ನು ಕಳುಹಿಸಿ ಅವರ ಒಪ್ಪಿಗೆ ಪಡೆಯಬೇಕು. ವಿಶೇಷ ಸಂದರ್ಭದಲ್ಲಿ ಅನ್ಯ ರಾಜ್ಯದ ವಿಶ್ವವಿದ್ಯಾಲಯದ ಪರಿಣಿತ ತಜ್ಞರನ್ನು ಮೌಲ್ಯಮಾಪನ ಕ್ರಿಯೆಗೆ ಬಳಸಿಕೊಳ್ಳಬಹುದು.

೨. ಮೌಲ್ಯಮಾಪನ ಮಾಡುವ ಮೌಲ್ಯಮಾಪಕರಿಗೆ ಕನಿಷ್ಟ ೧ ತಿಂಗಳಿಂದ ಗರಿಷ್ಠ ೨ ತಿಂಗಳ ಕಾಲಾವಧಿಯನ್ನು ನೀಡಬೇಕು. ಮೂರು ತಿಂಗಳಲ್ಲಿ ಮೌಲ್ಯಮಾಪಕರು ವರದಿ ಕಳಿಸದೆ ಇದ್ದರೆ ಅವರ ಆಯ್ಕೆಯನ್ನು ರದ್ದು ಮಾಡಿ ಕಾಯ್ದಿಟ್ಟ ಮೂರನೇ ಮೌಲ್ಯಮಾಪಕರಿಗೆ ಕಳುಹಿಸಬೇಕು. ಒಟ್ಟಾರೆಯಾಗಿ ಮೌಲ್ಯಮಾಪನ ಪ್ರಕ್ರಿಯೆ ಮೂರು ತಿಂಗಳ ಕಾಲಾವಧಿಯಲ್ಲಿ ಮುಗಿಯಬೇಕು.

೩. ಮಾರ್ಗದರ್ಶಕರು ಮೌಲ್ಯಮಾಪನ ವರದಿಯನ್ನು ನೀಡಬೇಕು.

## ೧೫. ಮೌಖಿಕ ಪರೀಕ್ಷೆ

೧. ಅಧ್ಯಯನ ಪ್ರಬಂಧದ ಮೌಲ್ಯಮಾಪನ ಹಾಗೂ ಪರಾಮರ್ಶೆಯ ಬಳಿಕ ಪಿಎಚ್.ಡಿ. ವಿದ್ಯಾರ್ಥಿಯ ಮುಕ್ತ ಮೌಖಿಕ ಪರೀಕ್ಷೆ ನಡೆಸಬೇಕು. ಮೌಖಿಕ ಪರೀಕ್ಷೆಯಲ್ಲಿ ಕುಲಪತಿಗಳೂ ಒಳಗೊಂಡಂತೆ ಅವರು ನೇಮಿಸುವ ಇಬ್ಬರು ಆಂತರಿಕ ವಿದ್ವಾಂಸರು ಇರಬೇಕು. (ಅಧ್ಯಯನಾಂಗದ ನಿರ್ದೇಶಕರು ಮತ್ತು ಕುಲಪತಿಗಳು ಸೇರಿ ಈ ಇಬ್ಬರು ಆಂತರಿಕ ವಿದ್ವಾಂಸರನ್ನು ನೇಮಿಸುತ್ತಾರೆ.) ಈ ಮೌಖಿಕ ಪರೀಕ್ಷೆಗೆ ಅಗತ್ಯಬಿದ್ದರೆ ಹತ್ತಿರದ ಒಬ್ಬ ಬಾಹ್ಯ ಮೌಲ್ಯಮಾಪಕರನ್ನು ಆಹ್ವಾನಿಸಬಹುದು. ಮೌಖಿಕ ಪರೀಕ್ಷೆಯನ್ನು ಕೆಳಕಂಡವರನ್ನೊಳಗೊಂಡ ಪರೀಕ್ಷಾ ಮಂಡಳಿಯು ನಡೆಸಬೇಕು.

| | | |
|---|---|---|
| ಅ. ಕುಲಪತಿಯವರು | : | ಅಧ್ಯಕ್ಷರು |
| ಆ. ಆಯಾ ನಿಕಾಯದ ಡೀನ್ | : | ಸದಸ್ಯರು |
| ಇ. ಆಯಾ ವಿಭಾಗದ ಮಾರ್ಗದರ್ಶಕರು | : | ಸದಸ್ಯರು |
| ಈ. ಬಾಹ್ಯ ಮೌಲ್ಯಮಾಪಕರು (ಒಬ್ಬರು) | : | ಸದಸ್ಯರು |
| ಉ. ಆಂತರಿಕ ಮೌಲ್ಯಮಾಪಕರು | : | ಕನಿಷ್ಠ ಇಬ್ಬರು, ಸದಸ್ಯರು |
| ಊ. ವಿಭಾಗದ ಮುಖ್ಯಸ್ಥರು | : | ಸದಸ್ಯರು |
| ಋ. ನಿರ್ದೇಶಕರು, ಅಧ್ಯಯನಾಂಗ | : | ಸದಸ್ಯ ಸಂಚಾಲಕರು |

೨. ಮಾನ್ಯ ಕುಲಪತಿಯವರು ಹಾಜರಾಗಲು ಸಾಧ್ಯವಾಗದ ವಿಶೇಷ ಸಂದರ್ಭದಲ್ಲಿ ಸಂಬಂಧಪಟ್ಟ ನಿಕಾಯದ ಡೀನ್ ಅವರು ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿರುತ್ತಾರೆ.

೩. ಮೌಖಿಕ ಪರೀಕ್ಷೆ ಮಂಡಳಿಯ ಸದಸ್ಯರ ಶಿಫಾರಸ್ಸನ್ನಾಧರಿಸಿ ಸಮಿತಿಯ ಅಧ್ಯಕ್ಷರಾದವರು ಪದವಿ ಘೋಷಣೆ ಮಾಡುತ್ತಾರೆ.

೪. ಮೌಲ್ಯಮಾಪಕರ ಧನಾತ್ಮಕ ವರದಿಯ ಹೊರತಾಗಿಯೂ ಮೌಖಿಕ ಪರೀಕ್ಷೆಯಲ್ಲಿ ಅಭ್ಯರ್ಥಿಯು ತನ್ನ ವಿಷಯದಲ್ಲಿ ತೋರುವ ಪಾಂಡಿತ್ಯವು ಕಳಪೆ ಎಂದು ಕಂಡುಬಂದಲ್ಲಿ ಪರೀಕ್ಷಾ ಮಂಡಳಿಯ ಸದಸ್ಯರುಗಳು ನೀಡುವ ಆಧಾರ ಸಹಿತ ಲಿಖಿತ ಆಕ್ಷೇಪಗಳನ್ನು ಗಂಭೀರವಾಗಿ ಪರಿಗಣಿಸಿ, ಪರೀಕ್ಷಾ ಮಂಡಳಿಯ ಅಧ್ಯಕ್ಷರು ಮಹಾಪ್ರಬಂಧದ ಫಲಿತಾಂಶವನ್ನು ತಡೆಹಿಡಿಯುವ, ರದ್ದುಗೊಳಿಸುವ ಅಥವಾ ಪುನರ್ ಮಂಡಿಸಲು ಆದೇಶ ನೀಡುವ ಅಧಿಕಾರ ಹೊಂದಿರುತ್ತಾರೆ.

೫. **ಮೌಖಿಕ ಪರೀಕ್ಷೆಯಲ್ಲಿ ಪರಿಗಣಿಸುವ ಮುಖ್ಯ ಸಂಗತಿಗಳು:**

೧. ಅಭ್ಯರ್ಥಿಯು ಅಧ್ಯಯನದ ಉದ್ದೇಶ, ವಿಧಾನ, ವಾದದ ಮಂಡನೆ ಹಾಗೂ ವಾದದ ಸಮರ್ಥನೆಗಳಲ್ಲಿ ತೋರುವ ಪ್ರಬುದ್ಧತೆ

೨. ಅಧ್ಯಯನದೊಂದಿಗಿನ ಅಭ್ಯರ್ಥಿಯ ತನ್ಮಯತೆ ಹಾಗೂ ಅಧ್ಯಯನ ಕ್ಷೇತ್ರಕ್ಕೆ ಅದರ ಕೊಡುಗೆ.

೩. ಮೌಖಿಕ ಪರೀಕ್ಷಾ ಮಂಡಳಿ ಸದಸ್ಯರು ಆಧಾರ ಸಮೇತ ಎತ್ತುವ ಪ್ರತಿಕ್ರಿಯೆಗೆ ವಾದ ವಿವಾದಗಳಿಗೆ ಅಭ್ಯರ್ಥಿ ಸಮರ್ಥನೀಯ ಉತ್ತರ ನೀಡುವುದು.

೪. ಈ ಎಲ್ಲ ಸಂಗತಿಗಳ ಆಧಾರದ ಮೇಲೆ ಮೌಖಿಕ ಪರೀಕ್ಷಾ ಮಂಡಳಿಯು ಪಿಎಚ್.ಡಿ ಮಹಾಪ್ರಬಂಧದ ಫಲಿತಾಂಶದ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಲು ಅಧ್ಯಕ್ಷರಿಗೆ ಶಿಫಾರಸ್ಸು ಮಾಡಬಹುದು

**೧೬. ಪ್ರಬಂಧಗಳ ಅಧೀನತೆ**

೧. ಅಂಗೀಕೃತ ಪಿಎಚ್.ಡಿ. ಪದವಿಯ ಅಧ್ಯಯನ ಪ್ರಬಂಧಗಳ ಸಾಫ್ಟ್‌ಕಾಪಿಯನ್ನು ವಿಶ್ವವಿದ್ಯಾಲಯವು ಯು.ಜಿ.ಸಿ.ಗೆ ಮೂವತ್ತು ದಿನದೊಳಗಾಗಿ ಕಳಿಸಬೇಕು. INFLEBNET ಮತ್ತು ಯುಜಿಸಿ ಅಂತರ್ಜಾಲದಲ್ಲಿ ಲಭಿಸುವಂತೆ ಅಧ್ಯಯನಾಂಗವು ವ್ಯವಸ್ಥೆ ಮಾಡುತ್ತದೆ

೨. ಅಧ್ಯಯನ ಪ್ರಬಂಧದ ಮೇಲಿನ ಸಂಪೂರ್ಣ ಹಕ್ಕು ಕನ್ನಡ ವಿಶ್ವವಿದ್ಯಾಲಯಕ್ಕೆ ಸೇರಿರುತ್ತದೆ. ಅದನ್ನು ಅಭ್ಯರ್ಥಿಯು ಪ್ರಕಟಿಸಿಕೊಳ್ಳುವ ಸಂದರ್ಭದಲ್ಲಿ ವಿಶ್ವವಿದ್ಯಾಲಯದಿಂದ ಲಿಖಿತ ಅನುಮತಿ ಪಡೆಯಬೇಕು. ಹಾಗೆ ಪ್ರಕಟಿಸಿಕೊಳ್ಳುವ ಸಂದರ್ಭದಲ್ಲಿ ಮೌಲ್ಯಮಾಪಕರು ಸೂಚಿಸಿರುವ ಎಲ್ಲಾ ರೀತಿಯ ತಿದ್ದುಪಡಿಗಳನ್ನು ಅಳವಡಿಸಿ ಅಧ್ಯಯನಾಂಗಕ್ಕೆ ಸಲ್ಲಿಸಿ ಪ್ರಮಾಣ ಪತ್ರವನ್ನು ಪಡೆಯಬೇಕು. ಅಭ್ಯರ್ಥಿಯು ವಿಶ್ವವಿದ್ಯಾಲಯವನ್ನು ಸ್ಮರಿಸಬೇಕು. ಪ್ರಕಟವಾದ ಮೇಲೆ ಆರು ಪ್ರತಿಗಳನ್ನು ಅಧ್ಯಯನಾಂಗಕ್ಕೆ ಕೊಡಬೇಕು.

****